# ಗೃಹಸ್ಥರಿಗೆ ಶ್ರೀರಾಮಕೃಷ್ಣರ ಗೃಹೀಭಕ್ತರು ತೋರಿದ ಆದರ್ಶ

ಡಾ. ಇ. ವಸಂತ ಕುಮಾರ್

ಶ್ರೀರಾಮಕೃಷ್ಣರ ಜೀವನ, ಉಪದೇಶಗಳಿಂದ ಸ್ಫೂರ್ತಿ ಪಡೆದ ಸಂನ್ಯಾಸಿಗಳ ಪರಂಪರೆ ಒಂದೆಡೆ ಬೆಳೆದು ಬಂದಂತೆ, ಅವರ ಶ್ರೇಷ್ಠ ಗೃಹೀ ಭಕ್ತರ ಪರಂಪರೆಯೂ ವಿಪುಲವಾಗಿ ಬೆಳೆದುಬಂತು. ಅವರಲ್ಲಿ ಪ್ರಮುಖರಾದ ಕೆಲವರ ಜೀವನವನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಲೇಖನವನ್ನು ಬರೆಯಲಾಗಿದೆ. ಲೇಖಕರು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರು. ಶ್ರೀರಾಮಕೃಷ್ಣ ಆಶ್ರಮದ ಭಕ್ತರಾಗಿರುವ ಅವರು 'ವಿವೇಕಪ್ರಭ'ದಲ್ಲಿ ಅನೇಕ ಲೇಖನಗಳನ್ನು ಬರೆದಿದ್ದಾರೆ.

ಶ್ರೀರಾಮಕೃಷ್ಣರು, ಭವಸಾಗರದಲ್ಲಿ ಮುಳುಗುತ್ತ ತೇಲುತ್ತ ಕೈಕಾಲು ಬಡಿಯುತ್ತ, ಈ ಸಾಗರಕ್ಕೊಂದು ದಡವಿದೆಯೇ ಎಂದು ಹತಾಶರಾದವರಿಗೆ ಭಗವಂತನೆಂಬ ದಡಕ್ಕೆ ಸೇರಲಿರುವ ಒಂದು ನಾವೆಯಂತೆ; ಅವರನ್ನೆಲ್ಲಾ ಕೈಹಿಡಿದು ನಾವೆಯ ಮೇಲಕ್ಕೆ ಎಳೆದುಕೊಂಡು ದೇವರೆಡೆಗೆ ಪ್ರಯಾಣಿಸಲು ಅವರನ್ನು ಅಣಿ ಮಾಡುವರು. ಈ ಸಾಧಕ ಜೀವಿಗಳು ಬದ್ಧರಾಗಿರಬಹುದು, ಮುಮುಕ್ಷುಗಳಾಗಿರಬಹುದು, ಮುಕ್ತರಾಗಿರಬಹುದು ಅಥವಾ ನಿತ್ಯಮುಕ್ತರಾಗಿರಬಹುದು. ಭಗವಂತನೆಡೆಗೆ ಹೋಗುವ ಇಚ್ಛೆಯಿದ್ದರೆ ಸಾಕು, ಅವರನ್ನು ಸೂಜಿಗಲ್ಲಿನಂತೆ ಆಕರ್ಷಿಸಿ ತಮ್ಮತ್ತಕ್ಕೆಗೆ ಸೆಳೆದುಕೊಳ್ಳುವರು. ಸಾಧಕರು ವಿರಾಗಿಗಳಾದ ಸಂನ್ಯಾಸಿಗಳಾಗಿರಬಹುದು ಅಥವಾ ಸಂಸಾರಿಗಳಾಗಿರಬಹುದು. ಅವರಿಬ್ಬರಿಗೂ ಶ್ರೀರಾಮಕೃಷ್ಣರು ಆದರ್ಶವಾಗಿರುವರು. ಶ್ರೀರಾಮಕೃಷ್ಣರ ಗೃಹಸ್ಥಭಕ್ತರ ಸಂಖ್ಯೆ ಅಪಾರ. ಅವರ ಲೀಲಾಕಾಲದಲ್ಲಿ ಅವರೊಡನಾಡಿದ ಕೆಲವರ ಜೀವನವೃತ್ತಾಂತ ನಮಗಿಂದು ದೊರೆತಿದೆ. ಅವುಗಳಲ್ಲಿ ಕೆಲವನ್ನು ನಾವಿಲ್ಲಿ ಗಮನಿಸಬಹುದು. ಅದು ಭವಾರಣ್ಯದಲ್ಲಿ ದಿಕ್ಕಿಲ್ಲದೆ ಅಲೆಯುತ್ತಿರುವವರಿಗೆ ದಿಕ್ಸೂಚಿಯಾಗಿ ಭರವಸೆಯ ಬೆಳಕಾಗುವುದು.

### ರಾಣಿ ರಾಸಮಣಿ, ಮಥುರನಾಥ ಬಿಶ್ವಾಸ್ ಮತ್ತು ಹೃದಯನಾಥ ಮುಖೋಪಾಧ್ಯಾಯ

ಇಂದು ಶ್ರೀರಾಮಕೃಷ್ಣರ ಲೀಲಾಸ್ಥಾನವೆಂದು ಪ್ರಸಿದ್ಧವಾಗಿರುವ ದಕ್ಷಿಣೇಶ್ವರದ ಕಾಳೀ ದೇವಸ್ಥಾನವನ್ನು ನಿರ್ಮಿಸಿದವಳು ರಾಸಮಣಿ. ಅವಳು ಪುಟ್ಟ ಮಗುವಾಗಿದ್ದಾಗ ತಾಯಿ ಅವಳನ್ನು ಪ್ರೀತಿಯಿಂದ 'ರಾಣಿ' ಎಂದು ಕರೆಯುತ್ತಿದ್ದಳು. ಅದು ಅವಳ ಹೆಸರಿಗೆ ಸೇರಿಹೋಯಿತು. ಮಥುರನಾಥ ಬಿಶ್ವಾಸ್, ರಾಣಿ ರಾಸಮಣಿಯ ಅಳಿಯ. ದಕ್ಷ ಆಡಳಿತಕ್ಕೆ ಹೆಸರಾಗಿದ್ದ. ಹೃದಯ, ಶ್ರೀರಾಮಕೃಷ್ಣರ ಸೇವೆಯನ್ನು ಅಂಗರಕ್ಷಕನಂತೆ ಎಡೆಬಿಡದೆ ೨೫ ವರ್ಷಗಳ ಕಾಲ ಮಾಡಿದವನು.

ರಾಸಮಣಿ, ಶ್ರೀರಾಮಕೃಷ್ಣರ ಅವತರಣಕ್ಕೆ ೪೩ ವರ್ಷಗಳ ಮೊದಲು ಬಡ ರೈತ ಕುಟುಂಬದಲ್ಲಿ ಜನಿಸಿದಳು. ಅವಳ ತಂದೆಗೆ ಓದಲು ಬರೆಯಲು ಬರುತ್ತಿತ್ತು. ಮಗಳಿಗೂ ಕಲಿಸಿದನು. ರಾಮಾಯಣ, ಮಹಾಭಾರತದ ಕಥೆಗಳನ್ನು ಮಕ್ಕಳಿಗೆ ಹೇಳುತ್ತಿದ್ದನು. ರಾಸಮಣಿ ಬಾಲ್ಯದಿಂದಲೇ ಕಾಳಿಯ ಭಕ್ತಳಾಗಿದ್ದಳು. ಬಡ ಕುಟುಂಬದಲ್ಲಿ ಹುಟ್ಟಿದ್ದರೂ ವಿವಾಹವಾಗಿ ಆಗರ್ಭ ಶ್ರೀಮಂತರ ಮನೆ ಸೇರಿದಳು. ಅವಳಲ್ಲಿ ಅನೇಕ ಗುಣಗಳಿದ್ದುವು. ಬುದ್ಧಿವಂತೆ, ವ್ಯವಹಾರ ನಿಪುಣೆ, ಯಥಾರ್ಥವಾದಿ, ಸತ್ಯನಿಷ್ಠಳು, ನ್ಯಾಯಕ್ಕಾಗಿ ಹೋರಾಡುವ ಕೆಚ್ಚೆದೆ ಅವಳಿಗಿತ್ತು. ಅಪಾರ ಸಂಪತ್ತಿಗೆ ಒಡೆಯಳಾಗಿದ್ದರೂ ಉದಾರಿಯಾಗಿದ್ದಳು, ಬಡವರಿಗೆ ನೆರವಾಗುತ್ತಿದ್ದಳು.



ರಾಣಿ ರಾಸಮಣಿ

ಅವಳ ಕಾರ್ಯ ಯೋಜನೆಯಲ್ಲಿ ಸಾರ್ಥಕತೆ ಮತ್ತು ದೂರದೃಷ್ಟಿ ಇತ್ತು. ಸರಳೆ ಮತ್ತು ನಿಷ್ಕಪಟಿಯಾಗಿದ್ದಳು. ಅಪರೂಪದ ಗುಣಗಳ ಸಂಗಮವೇ ಸರಿ! ಹದಿನೆಂಟನೆ ಶತಮಾನದ ಸ್ತ್ರೀಯರ ಸಾಮಾಜಿಕ ಸ್ಥಿತಿಯ ದೃಷ್ಟಿಯಿಂದ ನೋಡಿದರೆ ಈಕೆ ಅವಳ ಕಾಲದಿಂದ ಬಹಳ ಮುಂದಿದ್ದಳು. ಬಡವರಿಗಾಗಿ ಶೋಷಿತರಿಗಾಗಿ ಪ್ರಬಲರಾದ ಬ್ರಿಟಿಷ್ ಅಧಿಕಾರಿಗಳನ್ನು ಧೈರ್ಯ ಮತ್ತು ಕುಶಲತೆಯಿಂದ ಎದುರಿಸಿದುದರಿಂದ ಈಕೆಗೆ ಸಾರ್ವಜನಿಕರ ಗೌರವ ಮತ್ತು ಮೆಚ್ಚುಗೆ ಇತ್ತು. ಪತಿಯ ಕಾಲಾನಂತರ ಆತನ ಅಪಾರ ಆಸ್ತಿ ಮತ್ತು ವ್ಯವಹಾರಗಳನ್ನು ಅಳಿಯನಾದ ಮಥುರನಾಥನ ಸಹಾಯದಿಂದ ಸಮರ್ಥವಾಗಿ ನಿಭಾಯಿಸಿದಳು.

ಬಾಲ್ಯದಿಂದಲೂ ಭಕ್ತಳಾದ ಈಕೆ ೧೮೪೭ರಲ್ಲಿ ಕಾಶೀಯಾತ್ರೆಗೆ ಸಿದ್ಧತೆ ಮಾಡಿದಳು. ಸಹ ಪ್ರಯಾಣಿಕರಿಗೂ ಸೇರಿದಂತೆ ಆರು ತಿಂಗಳಿಗಾಗುವಷ್ಟು ದಾಸ್ತಾನು ಇತ್ಯಾದಿಗಳಿಂದ ಕೂಡಿದ ೨೫ ದೋಣಿಗಳು ಸಿದ್ಧವಾದುವು. ಹೊರಡುವ ಹಿಂದಿನ ರಾತ್ರಿ ರಾಸಮಣಿಯ ಕನಸಿನಲ್ಲಿ ಜಗನ್ಮಾತೆ ಕಾಣಿಸಿಕೊಂಡು, "ನೀನು ಕಾಶಿಗೆ ಹೋಗಬೇಕಾಗಿಲ್ಲ, ಗಂಗಾನದಿಯ ತೀರದಲ್ಲಿ ನನಗೆ ದೇವಾಲಯವನ್ನು ನಿರ್ಮಿಸು. ನನ್ನ ಪೂಜೆ ಮತ್ತು ನೈವೇದ್ಯಕ್ಕೆ ವ್ಯವಸ್ಥೆ ಮಾಡು. ನಾನು ಆ ವಿಗ್ರಹದಲ್ಲಿ ಯಾವಾಗಲೂ ನೆಲೆಸಿ ನಿನ್ನ ಪೂಜೆಯನ್ನು ಸ್ವೀಕರಿಸುತ್ತೇನೆ" ಎಂದು ಹೇಳಿದಳು. ರಾಸಮಣಿ

ಪ್ರಯಾಣವನ್ನು ರದ್ದುಗೊಳಿಸಿ ಕಾಳೀದೇವಾಲಯಕ್ಕಾಗಿ ವಿಶಾಲವಾದ ನಿವೇಶನವನ್ನು ಹುಡುಕಿ ದೇವಾಲಯದ ನಿರ್ಮಾಣಕ್ಕೆ ಸನ್ನದ್ಧಳಾದಳು. ಇಪ್ಪತ್ತು ಎಕರೆಗಳಷ್ಟು ವಿಶಾಲವಾದ ಪ್ರದೇಶದಲ್ಲಿ ಸುಮಾರು ೧೫ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಭವ್ಯ ದೇಗುಲದ ನಿರ್ಮಾಣಕಾರ್ಯ ಎಂಟು ವರ್ಷ ನಡೆಯಿತು. ದಿನನಿತ್ಯದ ಪೂಜಾಕೈಂಕರ್ಯಕ್ಕೆ ಅನುಕೂಲವಾಗುವಂತೆ ದತ್ತಿಯನ್ನೂ ಮಾಡಿದಳು. ಕಾಳಿಕಾಮಾತೆಯ ವಿಗ್ರಹ ಕೆತ್ತುವ ಮೊದಲ ದಿನದಿಂದ ಹಿಡಿದು ಮುಗಿಯುವವರೆಗೆ ರಾಸಮಣಿ ನಿತ್ಯವೂ ಮೂರು ಸಲ ಸ್ನಾನ, ಸರಳ ಸಸ್ಯಾಹಾರ, ನೆಲದ ಮೇಲೆ ನಿದ್ರೆ, ಮತ್ತು ಯಥಾಶಕ್ತಿ ನಾಮಜಪ, ಪೂಜೆ, ಪ್ರಾರ್ಥನೆ ಮಾಡುತ್ತಿದ್ದಳು. ವಿಗ್ರಹವೂ ಸಿದ್ಧವಾಯಿತು, ದೇವಸ್ಥಾನದ ನಿರ್ಮಾಣಕಾರ್ಯ ಕೊನೆಯ ಹಂತ ತಲುಪುತ್ತಿತ್ತು. ಆದರೆ ಪೂಜಾರಿಗಳು ಸಿಕ್ಕಲಿಲ್ಲ. ಪೆಟ್ಟಿಗೆಯಲ್ಲಿಟ್ಟಿದ್ದ ಕಾಳೀವಿಗ್ರಹ ಬೆವೆತಿತ್ತು! ರಾಸಮಣಿಗೆ ಕನಸಿನಲ್ಲಿ ಕಾಳೀಮಾತೆ, ''ಇನ್ನೆಷ್ಟು ದಿನ ನನ್ನನ್ನು ಈ ಸ್ಥಿತಿಯಲ್ಲಿಟ್ಟಿರುವೆ? ಉಸಿರಾಡಲಾಗುತ್ತಿಲ್ಲ. ಆದಷ್ಟು ಬೇಗ ನನ್ನನ್ನು ಪ್ರತಿಷ್ಠಾಪಿಸು'' ಎಂದು ಆಜ್ಞಾಪಿಸಿದಳು. ರಾಣಿ ಇಂತಹ ಬಿಕ್ಕಟ್ಟಿನಲ್ಲಿ ಸಿಕ್ಕಿಕೊಂಡು ವ್ಯಥೆಪಡುತ್ತಿದ್ದಾಗಲೇ ಶ್ರೀರಾಮಕೃಷ್ಣರ ಅಣ್ಣ ರಾಮಕುಮಾರರು ಒಂದು ಉಪಾಯ ಸೂಚಿಸಿದರು. ಅದು ಫಲಿಸದೇ ಇದ್ದುದಕ್ಕಾಗಿ ಅವರೇ ಪೂಜಾರಿಗಳಾಗಬೇಕಾಯಿತು. ಅವರ ನೇತೃತ್ವದಲ್ಲಿ ೧೮೫೫ರಲ್ಲಿ ಕಾಳಿಯ ಪ್ರತಿಷ್ಠಾಪನೆ ನಡೆಯಿತು. ಆ ಸಮಯದಲ್ಲಿ ೧೯ ವರ್ಷದ ಶ್ರೀರಾಮಕೃಷ್ಣರು ಅಲ್ಲಿದ್ದರು. ಹೃದಯನೂ ಬಂದಿದ್ದ. ಇದಾದ ಕೆಲವು ತಿಂಗಳಲ್ಲಿ ರಾಮಕುಮಾರರು ಕಾಲವಾದರು. ಶ್ರೀರಾಮಕೃಷ್ಣರೇ ಪೂಜಾರಿಗಳಾಗಬೇಕಾಯಿತು. ದೇವಿಗೆ ಧರಿಸುವ ಒಡವೆಗಳ ಜವಾಬ್ದಾರಿಯನ್ನು ತೆಗೆದುಕೊಳ್ಳಲು ತಮಗೆ ಸಾಧ್ಯವಾಗುವುದಿಲ್ಲವೆಂದು ಪೂಜಾರಿಯ ಕೆಲಸವನ್ನು ನಿರಾಕರಿಸಿದರು. ಹೃದಯ ಅದರ ಜವಾಬ್ದಾರಿಯನ್ನು ತೆಗೆದುಕೊಳ್ಳಲು ಮುಂದೆ ಬಂದುದರಿಂದ ಶ್ರೀರಾಮಕೃಷ್ಣರು ಪೂಜಾರಿಯಾಗಲು ಸಮ್ಮತಿಸಿದರು. ಆಗಲೆ ರಾಣಿ ರಾಸಮಣಿ ಮತ್ತು ಮಥುರನಾಥರಿಗೆ ಶ್ರೀರಾಮಕೃಷ್ಣರ ಪರಿಚಯವಾದುದು. ನಂತರ ರಾಸಮಣಿ ಆರು ವರ್ಷಗಳ ಕಾಲ ಬದುಕಿದ್ದಳು. ಶ್ರೀರಾಮಕೃಷ್ಣರ ಅಲೌಕಿಕ ಪೂಜೆ, ಪ್ರಚಂಡ ಆಧ್ಯಾತ್ಮಿಕ ಸಾಧನೆ, ಭಗವದುನ್ಮಾದ ಮತ್ತು ಕಾಳೀಮಾತೆಯ ಸಾಕ್ಷಾತ್ಕಾರ — ಇವನ್ನು ಕಣ್ಣಾರೆ ಕಂಡಳು. ಅವರ ಸೇವೆ ಮಾಡಿದಳು. ದೇವಸ್ಥಾನದಲ್ಲಿ ಪೂಜಾಕೈಂಕರ್ಯಗಳು ನಿರ್ವಿಘ್ನವಾಗಿ ನಡೆದುಕೊಂಡು ಹೋಗಲು ಬೇಕಾದ ಎಲ್ಲಾ ವ್ಯವಸ್ಥೆಯನ್ನೂ ಮಾಡಲು ಶ್ರಮಿಸಿದಳು. ಹೆಚ್ಚು ಸಮಯವನ್ನು ಆಧ್ಯಾತ್ಮಿಕ ಸಾಧನೆಯಲ್ಲಿ ಕಳೆಯತೊಡಗಿದಳು. ಜೀವನದ ಕೊನೆಯ ಕ್ಷಣಗಳಲ್ಲಿ ಅವಳನ್ನು ಗಂಗಾನದಿಯ ದಡಕ್ಕೆ ತೆಗೆದುಕೊಂಡು ಹೋಗಲಾಯಿತು. ಅವಳ ಮುಂದೆ ಹಚ್ಚಿದ್ದ ದೀಪಗಳನ್ನು ನೋಡಿ, ''ಅವನ್ನು ತೆಗೆಯಿರಿ. ಅವು ಕೃತಕವಾದವು. ಈಗ ನನ್ನ ತಾಯಿ ಬಂದಿರುವಳು. ಅವಳಿಂದ ಹೊಮ್ಮುತ್ತಿರುವ ಕಾಂತಿ ಎಲ್ಲವನ್ನೂ ಬೆಳಗುತ್ತಿದೆ. ಅಮ್ಮ, ನೀನು ಬಂದಿರುವೆ!'' ಎನ್ನುತ್ತಾ ಕೊನೆಯುಸಿರೆಳೆದಳು. ದಿವ್ಯಚೇತನವೊಂದು ಶ್ರೀರಾಮಕೃಷ್ಣರ ಲೀಲಾನಾಟಕಕ್ಕೆ ರಂಗಭೂಮಿಯನ್ನು ಸಿದ್ಧಗೊಳಿಸಿ ಕಣ್ಮರೆಯಾಯಿತು.

ರಾಸಮಣಿಯ ಕಾಲಾನಂತರ ಮಥುರನಾಥ ಹತ್ತು ವರುಷ ಶ್ರೀರಾಮಕೃಷ್ಣರ ಸೇವೆ ಮಾಡಿದ. ಅವರೊಬ್ಬ 'ಹುಚ್ಚು ಪೂಜಾರಿ' ಎಂಬ ಕಾಲದಿಂದ ಅವರು ಸಾಧನೆಯ ಉತ್ತುಂಗ ಶಿಖರವಾದ ಅದ್ವೈತ ಸಾಧನೆ ಮಾಡುವವರೆಗೂ ಅವರ ಆವಶ್ಯಕತೆಗಳನ್ನು ಪೂರೈಸುತ್ತಿದ್ದ. ಅವರನ್ನು 'ತಂದೆ' ಎಂದು ಸಂಬೋಧಿಸುತ್ತಿದ್ದ. ಶ್ರೀರಾಮಕೃಷ್ಣರ ಪೂಜೆ ಅಲೌಕಿಕವಾಗಿರುತ್ತಿತ್ತು. ಪೂಜಾರಿಗಳಾದ ಸ್ವಲ್ಪ ಕಾಲದಲ್ಲೇ ಅವರಿಗೆ ಭಗವದುನ್ಮಾದ ಉಂಟಾಯಿತು. ಕಾಳೀಮಾತೆಯೊಂದಿಗೆ ಮಾತನಾಡುತ್ತಿದ್ದರು. ನೈವೇದ್ಯವನ್ನು ಕೆಲವು ವೇಳೆ ಬೆಕ್ಕಿಗೆ ಕೊಟ್ಟು ಬಿಡುತ್ತಿದ್ದರು ಅಥವಾ ತಾವೇ ರುಚಿ ನೋಡುತ್ತಿದ್ದರು.


ಮಥುರನಾಥ

ಅಂತಹ ಕಾಲದಲ್ಲಿ ಯಾರೂ ಇವರ ತಂಟೆಗೆ ಹೋಗದಂತೆ ಅವರನ್ನು ರಕ್ಷಿಸಿದ. ಶ್ರೀರಾಮಕೃಷ್ಣರು ಆಧ್ಯಾತ್ಮಿಕ ಸಾಧನೆಯ ಪ್ರಯೋಗ ಶಾಲೆಯಿದ್ದಂತೆ. ಒಮ್ಮೆ ಬೆಲೆ ಬಾಳುವ ಶಾಲನ್ನು ಹೊದೆದುಕೊಂಡರೆ ಯಾವ ಅನುಭವ ಆಗಬಹುದೆಂದು ತಿಳಿಯಲಿಚ್ಛಿಸಿ ಅದನ್ನು ತಂದುಕೊಡುವಂತೆ ಮಥುರನಿಗೆ ಹೇಳಿದರು. ಅದನ್ನು ಹೊದೆದು ತಮ್ಮ ಮನಸ್ಸನ್ನು ಉದ್ದೇಶಿಸಿ, ''ಇದೇ ಬೆಲೆ ಬಾಳುವ, ಬಾಬುಗಳು ಹೊದೆಯುವ ಶಾಲು. ಇದನ್ನು ಧರಿಸಿ ತಾವು ದೊಡ್ಡ ಮನುಷ್ಯರೆಂದು ಭಾವಿಸುವರು '' ಎಂದು ಹೇಳಿದರು. ಮರುಕ್ಷಣ ಅದು ಅಶಾಶ್ವತ ಎನ್ನಿಸಿ ಅದನ್ನು ಹರಿದು ಕಾಲಿನಿಂದ ಹೊಸಕಿಹಾಕಿದರು. ಇನ್ನೊಮ್ಮೆ, ಒಂದು ಕೈಯಲ್ಲಿ ಹೊನ್ನು ಇನ್ನೊಂದರಲ್ಲಿ ಮಣ್ಣು ಹಿಡಿದು, ''ಇದು ಹೊನ್ನು, ಇದು ಮಣ್ಣು. ಇವೆರಡೂ ಒಂದೆ, ಅಷ್ಟೇ ನಿಷ್ಪ್ರಯೋಜಕ, ದೇವರು ಬೇಕಾದವನಿಗೆ'' ಎಂದು ಹೇಳುತ್ತಾ ಗಂಗೆಗೆ ಬಿಸಾಡಿದರು. ಈ ಸಾಧನೆಗೆ ಬೇಕಾದ ಹೊನ್ನನ್ನೂ ಮಥುರ ಕೊಟ್ಟಿದ್ದ. ರಾಸಮಣಿ ಕಾಲವಾದ ಮೇಲೆ ಭೈರವಿ ಬ್ರಾಹ್ಮಣಿ ಎಂಬ ಸ್ತ್ರೀ ಶ್ರೀರಾಮಕೃಷ್ಣರಿಗೆ ತಾಂತ್ರಿಕ ಸಾಧನೆಯ ಗುರುವಾಗಿ ದಕ್ಷಿಣೇಶ್ವರಕ್ಕೆ ಬಂದಳು. ಶ್ರೀರಾಮಕೃಷ್ಣರನ್ನು ನೋಡಿ ಅವರಿಗೆ ಅವತಾರ ಪುರುಷರ ಲಕ್ಷಣಗಳಿವೆ ಎಂದು ಹೇಳಿದಳು. ಮಥುರನಿಗೆ ಆಶ್ಚರ್ಯವಾಯಿತು. ಪಂಡಿತರ ಸಭೆಯನ್ನು ಕರೆಯುವಂತೆ ಮಥುರನಾಥನಿಗೆ ಹೇಳಿದಳು. ಸಭೆಯಲ್ಲಿ ಶ್ರೀರಾಮಕೃಷ್ಣರನ್ನು ಅವತಾರ ಪುರುಷ ಎಂದು ಘೋಷಿಸಿದಳು. ಮಥುರನಿಗೆ ತೀರ್ಥಯಾತ್ರೆ ಮಾಡ

ಬೇಕೆನಿಸಿದಾಗ ತನ್ನ ೧೨೫ ಜನರ ಬಳಗದೊಂದಿಗೆ ಶ್ರೀರಾಮ ಕೃಷ್ಣರನ್ನೂ ಕರೆದೊಯ್ದನು. ನಾಲ್ಕು ತಿಂಗಳು, ವಾರಾಣಸಿ, ದೇವಘರ್, ಅಲಹಾಬಾದ್ ಮುಂತಾದ ಸ್ಥಳಗಳಲ್ಲಿ ಪ್ರಸಿದ್ಧ ದೇವ ಸ್ಥಾನಗಳು, ಮಹಾಪುರುಷರ ವಾಸಸ್ಥಳಗಳು ಮುಂತಾದುವ ನ್ನೆಲ್ಲಾ ತೋರಿಸಿದನು. ಮಠಗಳಿಗೆ ಸೇವಾ ಸಂಸ್ಥೆಗಳಿಗೆ, ದೀನರಿಗೆ ಕಷ್ಟದಲ್ಲಿರುವವರಿಗೆ ಶ್ರೀರಾಮಕೃಷ್ಣರ ಇಚ್ಛೆಯಂತೆ ದಾನವಿತ್ತನು. ಚೈತನ್ಯದೇವನ ಜನ್ಮಸ್ಥಳವಾದ ನವದ್ವೀಪಕ್ಕೂ ಕರೆದುಕೊಂಡು ಹೋದನು. ಅವನ ಐಶ್ವರ್ಯದ ಒಂದು ಭಾಗ ಶ್ರೀರಾಮಕೃಷ್ಣರ ಸೇವೆಗೆ ಅವನಿಂದ ಸಮರ್ಪಿತವಾಯಿತು. ಇದರಿಂದ ಅವನ ಜೀವನ ಮಾರ್ಪಾಟಾಯಿತು. ರಾಜನಂತೆ ಬಾಳಿದ ಮಥುರನ ಜೀವನದಲ್ಲಿ ಐಶ್ವರ್ಯ, ವಿದ್ಯೆಯ ದರ್ಪಗಳು ಹಿಂದೆ ಸರಿದು ಆಧ್ಯಾತ್ಮಿಕ ಅಭೀಪ್ಸೆಗೆ ಎಡೆಮಾಡಿಕೊಟ್ಟವು. ಅವನ ಜೀವನ ಸಾರ್ಥಕವಾಗಿ ಕೊನೆಗೊಂಡಿತು. ದೇವಿ ಅವಳ ಲೋಕಕ್ಕೆ ಅವ ನನ್ನು ಕರೆದೊಯ್ದಳು ಎಂದು ಶ್ರೀರಾಮಕೃಷ್ಣರು ಹೇಳಿದರು.

ಹೃದಯ, ಶ್ರೀರಾಮಕೃಷ್ಣರ ಸೋದರಳಿಯ. ಶ್ರೀರಾಮ ಕೃಷ್ಣರಿಗಿಂತ ನಾಲ್ಕು ವರ್ಷ ಚಿಕ್ಕವನು. ಬಡವ. ರಾಸಮಣಿ, ಮಥುರನಾಥರಂತೆ ಭಕ್ತನಲ್ಲ. ಹಳ್ಳಿಯಲ್ಲಿ ಅವನಿಗೆ ಸಂಸಾರ ವಿದ್ದರೂ, ಶ್ರೀರಾಮಕೃಷ್ಣರ ೩೦ ವರ್ಷಗಳ ದಕ್ಷಿಣೇಶ್ವರದ ವಾಸ ದಲ್ಲಿ ೨೫ ವರ್ಷಗಳನ್ನು ಅವರ ಸೇವೆಯಲ್ಲಿ ಕಳೆದ. ಮಥುರನಾಥ ಕಾಲವಾದ ಮೇಲೆ ಒಂಭತ್ತು ವರ್ಷಗಳು ಶ್ರೀರಾಮಕೃಷ್ಣರೊಡನೆ ಇದ್ದ. ಶ್ರೀರಾಮಕೃಷ್ಣರ ಸಾಧನೆಯ ಬಿರುಗಾಳಿಯಲ್ಲಿ ಅವರೊಡ ನಿದ್ದ. ಅನೇಕ ದಿನಗಳು ಅವರು ಸಮಾಧಿ ಸ್ಥಿತಿಯಲ್ಲಿದ್ದಾಗ ಅವರು ಎಲ್ಲಿ ದೇಹಬಿಟ್ಟು ಹೋಗುವರೋ ಎಂದು ಬಡಿಗೆಯಿಂದ ಬಡಿದು ಆಹಾರವನ್ನು ಬಾಯಿಗಿಡು ತ್ತಿದ್ದ. ಮಥುರ ಶ್ರೀರಾಮಕೃಷ್ಣರನ್ನು ತೀರ್ಥಯಾತ್ರೆಗೆ ಕರೆದುಕೊಂಡು ಹೋದಾ ಗಲೂ ಅವರೊಂದಿಗಿದ್ದ. ಶ್ರೀರಾಮ ಕೃಷ್ಣರ ದೀರ್ಘಕಾಲದ ಒಡನಾಟದಿಂದ ಅವನಿಗೂ ಅನೇಕ ಆಧ್ಯಾತ್ಮಿಕ ದರ್ಶನ ಗಳು ಅನುಭವಗಳು ಆದುವು. ಅವನು ಮಾಡಿದ ಯಾವುದೋ ಪ್ರಮಾದದಿಂದ ದೇವಸ್ಥಾನದ ಅಧಿಕಾರಿಗಳು ಅವನನ್ನು ಕೆಲಸದಿಂದ ತೆಗೆದು ಹಾಕಿ ದರು. ಶ್ರೀರಾಮಕೃಷ್ಣರು ಮಹಾಸಮಾಧಿಸ್ಥರಾದ ಮೇಲೆ ೧೩ ವರ್ಷಗಳು ಜೀವಿಸಿದ್ದ. ಶ್ರೀರಾಮಕೃಷ್ಣರ ಸಂನ್ಯಾಸಿ ಶಿಷ್ಯರು ಅವ ನನ್ನು ಗೌರವಾದರಗಳಿಂದ ಕಾಣುತ್ತಿದ್ದರು. ಶ್ರೀರಾಮಕೃಷ್ಣರ ಸಾಧನ ಕಾಲದಲ್ಲಿ ಅವರ ಸಂನ್ಯಾಸಿ ಶಿಷ್ಯರು ಇರಲಿಲ್ಲ. ಇವನು, ಶ್ರೀರಾಮಕೃಷ್ಣರು ಕಾಳೀದೇವಾಲಯದ ಪೂಜಾರಿಯಾದ ದಿನ ದಿಂದ ಅವರ ಸಾಧನ ಕಾಲವೆಲ್ಲ , ಹಾಗೂ ಅವರ ಸಂನ್ಯಾಸಿ ಶಿಷ್ಯರು ಬರುವವರೆಗೂ ಅವರೊಡನೆ ಇದ್ದುದರಿಂದ ಅವನ



ಹೃದಯರಾಮ

ಅಪೂರ್ವ ನೆನಪುಗಳು, ಶ್ರೀರಾಮಕೃಷ್ಣರ ಜೀವನ ಚರಿತ್ರೆಯನ್ನು ಬರೆಯುವುದಕ್ಕೆ ಸ್ವಾಮಿ ಶಾರದಾನಂದರಿಗೆ ಅಮೂಲ್ಯ ಮಾಹಿತಿ ಗಳನ್ನು ಒದಗಿಸಿದುವು. ಇದು ಲೋಕಕ್ಕೆ ಅವನಿಂದಾದ ಮಹ ತ್ಸೇವೆ ಎಂದು ಪರಿಗಣಿಸಲಾಗಿದೆ.

### ಶಂಭುಚರಣ ಮಲ್ಲಿಕ

ಮಥುರನಾಥ ಶ್ರೀರಾಮಕೃಷ್ಣರ ಮೊದಲನೆ ರಸದ್ದಾರ್, ಎಂದರೆ ಆವಶ್ಯಕತೆಗಳನ್ನು ಪೂರೈಸುವವನು. ಶಂಭುಚರಣ ಎರಡನೆಯ ರಸದ್ದಾರ್ ಆಗಿದ್ದನು. ಬ್ರಿಟಿಷರ ಕಂಪನಿಯೊಂದ ರಲ್ಲಿ ಅವನಿಗೆ ಒಳ್ಳೆಯ ಉದ್ಯೋಗವಿತ್ತು, ಹೆಚ್ಚು ಸಂಬಳ ಬರು ತ್ತಿತ್ತು. ಮಕ್ಕಳಿರಲಿಲ್ಲ. ಹೆಂಡತಿಯೂ ಭಕ್ತೆ. ಶಂಭು ಶೀಲವಂತ. ಧಾರ್ಮಿಕ ಆಸಕ್ತಿಯುಳ್ಳವನಾಗಿದ್ದರಿಂದ ಬ್ರಾಹ್ಮ ಸಮಾಜದ ಕೇಶವ ಚಂದ್ರಸೇನ ನಲ್ಲಿಗೆ ಹೋಗುತ್ತಿದ್ದ. ಅವನ ಸ್ನೇಹಿತನೂ ಆಗಿದ್ದ. ಒಮ್ಮೆ ಅವನನ್ನು ಶ್ರೀರಾಮ ಕೃಷ್ಣರ ಭೇಟಿಗೆ ದಕ್ಷಿಣೇಶ್ವರಕ್ಕೆ ಕರೆದು ಕೊಂಡು ಹೋಗಿದ್ದ. ದೇವರಲ್ಲಿ ಅಪಾರ ಭಕ್ತಿ. ಬಹುದೂರದಿಂದ ದಕ್ಷಿಣೇಶ್ವರಕ್ಕೆ ನಡೆದು ಹೋಗುತ್ತಿದ್ದ. ಅದು ಅಷ್ಟು ಕ್ಷೇಮವಲ್ಲ, ಗಾಡಿಯಲ್ಲೇಕೆ ಹೋಗ ಬಾರದು ಎಂದು ಯಾರೋ ಸಲಹೆ ಮಾಡಿದ್ದಕ್ಕೆ, ''ನಾನು ಮನೆಯಿಂದ ಹೊರಡುವಾಗಲೇ ದೇವರ ಹೆಸರನ್ನು ಹೇಳಿಕೊಳ್ಳುತ್ತಾ ಹೋಗುತ್ತೇನೆ. ನನಗೆಲ್ಲಿಯ ಭಯ?'' ಎಂದು ಉತ್ತರವಿತ್ತ. ನಂತರ, ದಕ್ಷಿಣೇಶ್ವರ ದೇವಾಲಯದ ಹತ್ತಿರವೇ ವಾಸವಿದ್ದ. ಶ್ರೀರಾಮಕೃಷ್ಣರು ಆಗಾಗ ಅವನ ಮನೆಗೆ ಹೋಗು ತ್ತಿದ್ದರು. ಅವನ ಧಾರ್ಮಿಕ ದೃಷ್ಟಿ ವಿಶಾಲವಾಗಿತ್ತು. ಬೈಬಲ್ಲನ್ನು ಶ್ರೀರಾಮಕೃಷ್ಣರಿಗೆ ಓದಿ ಹೇಳುತ್ತಿದ್ದ. ಒಂದು ಉಚಿತ ಔಷಧಾ ಲಯವನ್ನು ನಡೆಸುತ್ತಿದ್ದ. ತನ್ನ ಎಲ್ಲಾ ಹಣ ಮತ್ತು ಸೌಲಭ್ಯ ಗಳನ್ನು ಬಡವರ ಸೇವೆಗೆ ಉಪಯೋಗಿಸಬೇಕೆಂಬುದು ಅವನ ಧ್ಯೇಯವಾಗಿತ್ತು. ತನ್ನ ಸಂಪತ್ತನ್ನೆಲ್ಲಾ ದೇವರಿಗೆ ಕೊಟ್ಟುಬಿಡ ಬೇಕೆಂದು ಒಮ್ಮೆ ಹೇಳಿದ. ಶ್ರೀರಾಮಕೃಷ್ಣರು ಅವನ ದೃಷ್ಟಿ ಯನ್ನು ತಿದ್ದಿ ವಿಶಾಲಗೊಳಿಸಿದರು. ''ನಿನ್ನ ಸಂಪತ್ತು ನಿನಗೆ ದೊಡ್ಡದು, ದೇವರಿಗಲ್ಲ. ಕೇವಲ ಸೇವಾಕಾರ್ಯವೇ ಗುರಿ ಯಲ್ಲ. ದೇವರು ನಿನಗೇನಾದರೂ ಪ್ರತ್ಯಕ್ಷನಾದರೆ, ಅವನನ್ನು ಆಸ್ಪತ್ರೆ ಮುಂತಾದುವಕ್ಕೆ ಬೇಡುವೆಯೇನು? ದೇವರನ್ನು ನೋಡಿ ಕೃತಾರ್ಥರಾಗುವುದು ನಮ್ಮ ಗುರಿಯಾಗಬೇಕಲ್ಲವೆ?'' ಎಂದು ಅವನ ಕಣ್ಣು ತೆರೆಸಿದರು. ಅವನ ಹೆಂಡತಿಯೂ ಶ್ರೀರಾಮಕೃಷ್ಣರ ಭಕ್ತೆಯಾಗಿದ್ದಳು. ಆಗಾಗ ಶ್ರೀಶಾರದಾದೇವಿಯವರನ್ನು ಭೇಟಿ ಯಾಗುತ್ತಿದ್ದಳು. ಮಥುರನ ಕಾಲಾನಂತರ ಶ್ರೀಶಾರದಾದೇವಿ ಯವರು ಎರಡನೆಯ ಬಾರಿ ದಕ್ಷಿಣೇಶ್ವರಕ್ಕೆ ಬಂದಾಗ ಕಿರಿದಾದ



ಶಂಭುಮಲ್ಲಿಕ

ನಹಬತ್ ಖಾನೆಯಲ್ಲಿ ಶ್ರೀರಾಮಕೃಷ್ಣರ ತಾಯಿಯೊಂದಿಗೆ ಇರಬೇಕಾಗಿತ್ತು. ಅವರ ಅನುಕೂಲಕ್ಕೆಂದು ಶಂಭು ಒಂದು ಕುಟೀರವನ್ನು ತನ್ನ ತೋಟದ ಹತ್ತಿರ ಕಟ್ಟಿಸಿಕೊಟ್ಟನು. ಅದರಲ್ಲಿ ಶಾರದಾ ಮಾತೆ ಒಂದು ವರ್ಷ ವಾಸವಿದ್ದರು. ನಂತರ ಅನಾರೋಗ್ಯದ ಕಾರಣ ಅವರು ನಹಬತ್‌ಗೆ ಹೋಗಬೇಕಾಯಿತು. ಶ್ರೀರಾಮಕೃಷ್ಣರ ಮತ್ತು ಶ್ರೀಶಾರದಾದೇವಿಯವರ ಸೇವೆಯನ್ನು ಶಂಭುಚರಣ ನಾಲ್ಕು ವರ್ಷ ಮಾಡಿದ. ಅನಾರೋಗ್ಯ ಪ್ರಾಪ್ತವಾಯಿತು. ‘‘ನನ್ನ ಗಂಟುಮೂಟೆ ಕಟ್ಟಿದ್ದೇನೆ, ಹೊರಡಲು ಸಿದ್ಧವಾಗಿದ್ದೇನೆ. ಎಲ್ಲವನ್ನೂ ತೊರೆದು ದೇವರ ಬಳಿಗೆ ಹೋಗುವಂತೆ ನನ್ನನ್ನು ಆಶೀರ್ವದಿಸಿ’’ ಎಂದು ಶ್ರೀರಾಮಕೃಷ್ಣರಲ್ಲಿ ಬೇಡಿ ಇಹಲೋಕದಿಂದ ನಿರ್ಗಮಿಸಿದನು.

## ರಾಮಚಂದ್ರ ದತ್ತ

ಈತ ಭಕ್ತರ ಮನೆಯಲ್ಲಿ ಹುಟ್ಟಿದವನು. ಕೃಷ್ಣನ ಪೂಜೆ ಮಾಡುವುದು, ಸ್ನೇಹಿತರನ್ನು ಆಹ್ವಾನಿಸಿ ಪ್ರಸಾದ ಹಂಚುವುದು ಇವನ ಬಾಲ್ಯದ ಆಟ. ವ್ಯಾಸಂಗದ ಕಾಲದಲ್ಲಿ ವಿಜ್ಞಾನವನ್ನು ಚೆನ್ನಾಗಿ ಕಲಿತ. ವೈದ್ಯಕೀಯ ಕಾಲೇಜಿನಲ್ಲಿಯೂ ಕಲಿತ. ರಸಾಯನ ಶಾಸ್ತ್ರದಲ್ಲಿ ಪಾರಂಗತನಾದ. ದೇಸಿ ಗಿಡವೊಂದರ ಅಂಶವನ್ನು ಉಪಯೋಗಿಸಿ ಆಮಶಂಕೆಗೆ ಔಷಧಿ ಕಂಡುಹಿಡಿದ. ಅದನ್ನು ಬ್ರಿಟಿಷ್ ಸರ್ಕಾರ ಅಂಗೀಕರಿಸಿ ಅದರ ತಯಾರಿಕೆಗೆ ಅನುಮತಿ ನೀಡಿತು. ಈ ಆವಿಷ್ಕಾರದಿಂದ ಪ್ರಸಿದ್ಧನಾದ. ಇಂಗ್ಲೆಂಡಿನ ರಸಾಯನಶಾಸ್ತ್ರ ಸಂಘದ ಸದಸ್ಯನಾದ. ಸರ್ಕಾರಿ ರಸಾಯನ ಶಾಸ್ತ್ರ ಪರೀಕ್ಷಕನಾಗಿ ಬಡ್ತಿ ಪಡೆದು ಕಲ್ಕತ್ತೆಯ ವೈದ್ಯಕೀಯ ಕಾಲೇಜಿನಲ್ಲಿ ಸೈನ್ಯದ ವೈದ್ಯಕೀಯ ವಿದ್ಯಾರ್ಥಿಗಳಿಗೆ ಪಾಠ ಹೇಳುತ್ತಿದ್ದ. ಬಹಳ ಹಣ ಬಂತು. ಆಧುನಿಕ ವಿಜ್ಞಾನಮತಿಯಾದ ಇವನು ನಿರೀಶ್ವರವಾದಿಯಾದ. ಋಜುಮಾರ್ಗಿಯಾದ ಈತನಿಗೆ ಇಷ್ಟ-ಅನಿಷ್ಟಗಳು ಪ್ರಬಲವಾಗಿದ್ದುವು. ಕಿರಿಯ ಮಗಳ ಮೃತ್ಯು ಇವನ ಜೀವನದ ಅಸ್ತಿತ್ವವನ್ನು ಅಲುಗಾಡಿಸಿತು. ಹಿಂದೂ, ಕ್ರೈಸ್ತ, ಬ್ರಾಹ್ಮಸಮಾಜದ ಧಾರ್ಮಿಕ ನಾಯಕರನ್ನು ಭೇಟಿ ಮಾಡಲಾರಂಭಿಸಿದ. ಧರ್ಮಗ್ರಂಥಗಳನ್ನು ಓದಿದ. ದೇವರು ಇರುವನೆ, ಅವನನ್ನು ನೋಡಲಾಗು ವುದೆ ಎಂಬ ಎಲ್ಲರೂ ಕೇಳುವ ಪ್ರಶ್ನೆಗಳು ಇವನಿಗೂ ಎದುರಾದುವು. ಕೇಶವ ಚಂದ್ರಸೇನನ ಬರವಣಿಗೆಗಳ ಮೂಲಕ ಶ್ರೀರಾಮಕೃಷ್ಣರ ಬಗ್ಗೆ ೧೮೭೯ರಲ್ಲಿ ತಿಳಿದ ಈತ ತಡಮಾಡದೆ ಅವರನ್ನು ನೋಡಲು ಹೋದ. ಶ್ರೀರಾಮಕೃಷ್ಣರ ಕೋಣೆಯ ಬಾಗಿಲು ಮುಚ್ಚಿತ್ತು. ಬಾಗಿಲನ್ನು ತಟ್ಟಲು ಸಂಕೋಚ ಪಡುತ್ತಿದ್ದಂತೆ ಶ್ರೀರಾಮಕೃಷ್ಣರೇ ಬಾಗಿಲನ್ನು ತೆರೆದು ‘ನಾರಾಯಣ’ ಎಂಬ ಅಭಿವಾದನದೊಂದಿಗೆ ಇವನನ್ನು ಸ್ವಾಗತಿಸಿ ಕುಳಿತುಕೊಳ್ಳಲು ಹೇಳಿದರು. ಶ್ರೀರಾಮಕೃಷ್ಣರು ಸಾಂಪ್ರದಾಯಿಕ ಸಂನ್ಯಾಸಿಗಳಂತೆ ಜಟಾಧಾರಿಗಳಾಗಿ ಕಾವಿಯುಟ್ಟು ಬೂದಿ ಬಳಿದುಕೊಂಡಿರದೆ ಸರಳತೆಯೇ ಮೂರ್ತಿವೆತ್ತಂತೆ ಇದ್ದುದನ್ನು ಗಮನಿಸಿದ. ‘‘ನೀವು ವೈದ್ಯರಲ್ಲವೆ?’’ ಎಂದು ಅಲ್ಲಿಯೇ ಮಲಗಿದ್ದ ಹೃದಯನನ್ನು ತೋರಿಸಿ, ‘‘ನೋಡಿ, ಇವನಿಗೆ ಜ್ವರ ಬಂದಿದೆ, ಇವನ ನಾಡಿಯನ್ನು ಪರೀಕ್ಷಿಸುವಿರಾ?’’ ಎಂದು ಶ್ರೀರಾಮಕೃಷ್ಣರು ಕೇಳಿದರು. ರಾಮಚಂದ್ರ ಸ್ತಂಭೀಭೂತನಾದ. ನಂತರ ನಾಡಿ ನೋಡಿ, ‘‘ದೇಹದ ಉಷ್ಣಾಂಶ ಸಾಮಾನ್ಯವಾಗಿದೆ’’ ಎಂದು ಹೇಳಿದ. ಮೊದಲ ನೋಟದಲ್ಲೇ ರಾಮ ಅವರಿಂದ ಆಕರ್ಷಿತನಾದ. ಶ್ರೀರಾಮಕೃಷ್ಣರು ಅವನನ್ನು ತಮ್ಮವರಂತೆ ಕಂಡರು. ಅಂದಿನಿಂದ ಪ್ರತಿ ಭಾನುವಾರ ಶ್ರೀರಾಮಕೃಷ್ಣರನ್ನು ನೋಡಲು ದಕ್ಷಿಣೇಶ್ವರಕ್ಕೆ ಹೋಗಲಾರಂಭಿಸಿದ. ಅವನ ಮನೆಯಲ್ಲಿ ರಕ್ತುರಾಮ ಎಂಬ ಒಬ್ಬ ಸೇವಕನಿದ್ದ. ಆತ ರಾಮಚಂದ್ರನಿಂದ ಶ್ರೀರಾಮಕೃಷ್ಣರ ಮಾತುಗಳನ್ನು ಕೇಳಿ ಅವರನ್ನು ನೋಡಲು ತವಕಿಸುತ್ತಿದ್ದ. ಆತನೆ ಮುಂದೆ ಸ್ವಾಮಿ ಅದ್ಭುತಾನಂದ ಎಂಬ ಶ್ರೀರಾಮಕೃಷ್ಣರ ಸಂನ್ಯಾಸಿ ಶಿಷ್ಯನಾದುದು.



ರಾಮಚಂದ್ರ ದತ್ತ

ರಾಮ ಒಮ್ಮೆ ಧೈರ್ಯ ಮಾಡಿ, ತನ್ನನ್ನು ಕಾಡುತ್ತಿದ್ದ, ‘‘ದೇವರಿರುವನೆ? ಅವನನ್ನು ನೋಡಲಾಗುವುದೆ?’’ ಎಂಬ ಪ್ರಶ್ನೆಗಳನ್ನು ಕೇಳಿದ. ಅದಕ್ಕೆ ಶ್ರೀರಾಮಕೃಷ್ಣರು, ‘‘ಹಗಲು ನಕ್ಷತ್ರಗಳು ಕಾಣದಿದ್ದರೆ, ನಕ್ಷತ್ರಗಳು ಇಲ್ಲವೆಂದಲ್ಲ. ಹಾಲಿನಲ್ಲಿ ಬೆಣ್ಣೆ ಇದೆ. ಆದರೆ, ಅದನ್ನು ಕೇವಲ ನೋಟದಿಂದ ತಿಳಿಯಲಾಗುವುದೆ? ಬೆಣ್ಣೆ ತೆಗೆಯಬೇಕಾದರೆ ತಣ್ಣನೆಯ ಸ್ಥಳದಲ್ಲಿ ಸೂರ್ಯೋದಯಕ್ಕೆ ಮುಂಚೆ ಹಾಲನ್ನು ಕಡೆಯಬೇಕು. ಕೊಳದಲ್ಲಿ ಮೀನನ್ನು ಹಿಡಿಯಬೇಕಾದರೆ, ಬಲ್ಲವರಿಂದ ಆ ಕಲೆಯನ್ನು ಕಲಿಯಬೇಕು. ನಂತರ ತಾಳ್ಮೆಯಿಂದ ಗಾಳವನ್ನು ನೀರಿನಲ್ಲಿ ಎಸೆಯಬೇಕು. ಬೆಂಡು ಮುಳುಗಿದ ಕೂಡಲೆ ಮೀನನ್ನು ದಡಕ್ಕೆ ಎಳೆಯಬಹುದು. ಹಾಗೆಯೆ, ಕೇವಲ ಇಚ್ಛೆಯಿಂದ ಭಗವಂತನನ್ನು ಸಾಕ್ಷಾತ್ಕಾರ ಮಾಡಿಕೊಳ್ಳಲಾಗುವುದಿಲ್ಲ. ಮಹಾತ್ಮರ ಉಪದೇಶಗಳಲ್ಲಿ ವಿಶ್ವಾಸವಿಟ್ಟು ನಿನ್ನ ಮನಸ್ಸನ್ನು ಗಾಳವನ್ನಾಗಿ ಮಾಡಿ ಪ್ರಾಣವನ್ನು ಕೊಕ್ಕೆಯನ್ನಾಗಿ ಮಾಡಬೇಕು. ನಿನ್ನ ಭಕ್ತಿ ಮತ್ತು ಜಪ ಗಾಳದ ತುದಿಗೆ ಕಟ್ಟಿರುವ ಹುಳುವಿನಂತೆ. ಕಾಲಕ್ರಮೇಣ ಭಗವದ್ದರ್ಶನದಿಂದ ನೀನು ಕೃತಾರ್ಥನಾಗುವೆ’’ ಎಂದು ಹೇಳಿದರು. ಬ್ರಾಹ್ಮಸಮಾಜದ ಸಂಪರ್ಕದಲ್ಲಿದ್ದ ಈತ ದೇವರು ಸಾಕಾರನೆಂದು ನಂಬುತ್ತಿರಲಿಲ್ಲ. ಇವನ ಮನಸ್ಸಿನಲ್ಲಿದ್ದುದನ್ನು ಗ್ರಹಿಸಿದ ಶ್ರೀರಾಮಕೃಷ್ಣರು, ‘‘ಹೌದು, ದೇವರನ್ನು ನೋಡಬಹುದು. ಯಾರ ಸೃಷ್ಟಿ ಇಷ್ಟು ಸುಂದರವೂ ಮನೋಹರವೂ ಆಗಿದೆಯೊ ಅದು ಅಗ್ರಾಹ್ಯವಾಗಿರಲು ಸಾಧ್ಯವೆ?’’ ಎಂದರು.

‘‘ಈ ಜನ್ಮದಲ್ಲಿಯೇ ದೇವರನ್ನು ಸಾಕ್ಷಾತ್ಕರಿಸಿಕೊಳ್ಳಲು ಸಾಧ್ಯವೆ?’’ ಎಂದು ರಾಮ ಕೇಳಿದ. ‘‘ಯಾವುದಕ್ಕೆ ನೀನು ಆಸೆ

ಪಡುವೆಯೊ ಅದು ನಿನಗೆ ದೊರೆಯುವುದು. ಯಶಸ್ಸಿಗೆ ನಂಬಿಕೆ ಯೊಂದೇ ಬೀಗದ ಕೈ'' ಎಂದು ಹೇಳಿದರು. ''ಆದರೆ ಸ್ಪಷ್ಟವಾದ ಪುರಾವೆ ಬೇಕಲ್ಲವೆ? ನೇರವಾಗಿ ದೇವರ ಅನುಭವವಾಗದ ಹೊರತು ನಮ್ಮ ದುರ್ಬಲ ಮತ್ತು ಸಂದೇಹಪೂರ್ಣ ಮನಸ್ಸು ಹೇಗೆ ಅವನ ಅಸ್ತಿತ್ವದಲ್ಲಿ ನಂಬಿಕೆ ಇಡಲು ಸಾಧ್ಯ ಎಂದು ಕೇಳಿದ. ಟೈಫಾಯ್ಡ್ ಬಂದಿರುವ ರೋಗಿ ಜ್ವರದ ತಾಪದಲ್ಲಿ ತಾನು ಕೊಡಗಟ್ಟಲೆ ನೀರು ಕುಡಿಯುವುದಾಗಿ ಮತ್ತು ರಾಶಿ ರಾಶಿ ಅನ್ನ ತಿನ್ನುವುದಾಗಿ ಹೇಳುತ್ತಾನೆ. ಆದರೆ ವೈದ್ಯ ಅದನ್ನು ಕೇಳಿಸಿಕೊಳ್ಳು ವುದೂ ಇಲ್ಲ ಮತ್ತು ರೋಗಿಯ ಇಚ್ಛೆಯ ಔಷಧಿ ಕೊಡುವುದೂ ಇಲ್ಲ. ತಾನು ಮಾಡುತ್ತಿರುವುದು ವೈದ್ಯನಿಗೆ ಗೊತ್ತಿದೆ'' ಎಂದು ಶ್ರೀರಾಮಕೃಷ್ಣರು ಹೇಳಿದರು. ರಾಮಚಂದ್ರನಿಗೆ ರಾಮಕೃಷ್ಣರ ಸರಳ ಉತ್ತರಗಳು ಮನದಟ್ಟಾದುವು.

ಸಾಧನೆ ಪ್ರಾರಂಭಿಸಿದ. ಭಗವದ್ವ್ಯಾಕುಲತೆ ಹೆಚ್ಚಾಯಿತು. ಒಂದು ರಾತ್ರಿ, ಪರಿಚಯವಿದ್ದ ಕೊಳದಲ್ಲಿ ಸ್ನಾನ ಮಾಡುತ್ತಿದ್ದಾಗ ಶ್ರೀರಾಮಕೃಷ್ಣರು ಅವನಿಗೆ ಒಂದು ಮಂತ್ರವನ್ನು ಉಪದೇಶಿಸಿ, ನಿತ್ಯವೂ ಸ್ನಾನದ ನಂತರ ನೂರು ಬಾರಿ ಜಪಿಸುವಂತೆ ಹೇಳಿದ ಕನಸಾಯಿತು. ಇದನ್ನು ಕೇಳಿದ ಶ್ರೀರಾಮಕೃಷ್ಣರು ಸಂತೋಷ ದಿಂದ, ಯಾರು ಕನಸಿನಲ್ಲಿ ದೈವೀಕೃಪೆ ಪಡೆಯುವರೊ ಅವರು ಖಂಡಿತವಾಗಿ ಮುಕ್ತರಾಗುವರು ಎಂದು ಹೇಳಿದರು. ಕ್ರಮೇಣ ದೈವಿಕ ಅಭೀಪ್ಸೆ ವೃದ್ಧಿಯಾಗಲಾರಂಭಿಸಿತು. 'ಚೈತನ್ಯ ಚರಿತಾ ಮೃತ' ವನ್ನು ಓದಲಾರಂಭಿಸಿದ. ಶ್ರೀರಾಮಕೃಷ್ಣರು ಮತ್ತು ಚೈತನ್ಯ ಒಬ್ಬರೇ ಎನ್ನಿಸತೊಡಗಿತು. ಭಕ್ತರ ಸೇವೆಯನ್ನು ಮಾಡು ವಂತೆ ಶ್ರೀರಾಮಕೃಷ್ಣರು ಹೇಳಿದರು. ಕೀರ್ತನೆಯನ್ನು ತನ್ನ ಮನೆಯಲ್ಲಿ ಏರ್ಪಾಡು ಮಾಡಲು ಪ್ರಾರಂಭಿಸಿದ. ಮೊದಲು ಕೃಪಣ ನಾದರೂ ನಂತರ ಅದರಲ್ಲಿ ಭಗವದಾನಂದವನ್ನು ಅನು ಭವಿಸುವಂತಾದ. ಗಳಿಸುವ ಆಸೆ ಬಂಧನದ ವಿಷವಾಗುವುದು ಎಂಬ ಶ್ರೀರಾಮಕೃಷ್ಣರ ಉಪದೇಶ ಅವನಿಗೆ ಮನದಟ್ಟಾಯಿತು. ಶಾಂತ ಸ್ಥಳದಲ್ಲಿ ಸಾಧನೆ ಭಜನೆ ಮಾಡಲೋಸುಗ ೧೮೮೩ರಲ್ಲಿ ಕಾಂಕುರ್ಗಾಚಿ ಎಂಬಲ್ಲಿ ತೋಟದ ಮನೆಯನ್ನು ಖರೀದಿಸಿದ. ಶ್ರೀರಾಮಕೃಷ್ಣರೂ ಅಲ್ಲಿಗೆ ಭೇಟಿಯಿತ್ತರು. ಆ ಮನೆಗೆ ಯೋಗೋ ದ್ಯಾನ ಎಂದು ಹೆಸರಿಟ್ಟ. ಶ್ರೀರಾಮಕೃಷ್ಣರು ಕೈತೊಳೆದುಕೊಂಡ ಕೊಳವನ್ನು ಶ್ರೀರಾಮಕೃಷ್ಣ ಕುಂಡ ಎಂದು ಹೆಸರಿಸಿದ. ಅಲ್ಲಿದ್ದ ಮಾವಿನ ಮರವನ್ನು ಶ್ರೀರಾಮಕೃಷ್ಣ ಭೋಗ್ ಎಂದು ಕರೆದ. ಶ್ರೀರಾಮಕೃಷ್ಣರ ಸಲಹೆಯಂತೆ ಪಂಚವಟಿ ಬೆಳೆಸಿದ. ಅವರ ಕಾಲಾನಂತರ ಅವರ ದೇಹಾವಶೇಷದ ಭಾಗವನ್ನು ತಂದು ಅವರು ಬಾಗಿ ನಮಸ್ಕರಿಸಿದ ಸ್ಥಳದಲ್ಲಿ ತುಳಸಿಗಿಡದೊಂದಿಗೆ ಸ್ಥಾಪಿಸಿದ. ನಂತರ ಅಲ್ಲಿ ಶ್ರೀರಾಮಕೃಷ್ಣರಿಗೆ ದೇವಸ್ಥಾನ ನಿರ್ಮಿಸ ಲಾಯಿತು.

ರಾಮಚಂದ್ರ ಶ್ರೀರಾಮಕೃಷ್ಣರ ನಿಷ್ಠಾವಂತ ಭಕ್ತನಾದ. ಅವನ ಹೆಂಡತಿಯೂ ಅನುಕೂಲೆಯಾಗಿದ್ದಳು. ಶ್ರೀರಾಮಕೃಷ್ಣರ ಕಾಲದಲ್ಲೇ ಅವರ ಬೋಧನೆಗಳನ್ನು ಸಂಗ್ರಹಿಸಿದ. ಅವರ ಜೀವನ ಚರಿತ್ರೆಯನ್ನು ಮೊಟ್ಟಮೊದಲು ಬರೆದವನು ಅವನೇ. ಆದರೆ ಅದನ್ನು ಅವರ ಜೀವಿತಕಾಲದಲ್ಲಿ ಪ್ರಕಟಿಸಬಾರದೆಂದು ಶ್ರೀರಾಮ ಕೃಷ್ಣರು ಹೇಳಿದರು. ಶ್ರೀರಾಮಕೃಷ್ಣರ ಬೋಧನೆಯನ್ನು ಹರ ಡುವ ಉದ್ದೇಶದಿಂದ 'ತತ್ತ್ವಮಂಜರಿ' ಎಂಬ ಬಂಗಾಳಿ ನಿಯತ ಕಾಲಿಕೆಯನ್ನು ಪ್ರಾರಂಭಿಸಿದ. ಅಲ್ಲಲ್ಲಿ ಆಗಾಗ ಶ್ರೀರಾಮಕೃಷ್ಣರ ಬಗ್ಗೆ ಉಪನ್ಯಾಸ ಮಾಡುತ್ತಿದ್ದ. ಶ್ರೀರಾಮ ಕೃಷ್ಣರ ಮಹಾಸಮಾಧಿ ಯ ನಂತರ ೧೩ ವರ್ಷಗಳು ಜೀವಿಸಿದ್ದ. ಅವರ ಜೀವನ, ಬೋಧನೆಗಳನ್ನು ಹರಡಲು ಯಾವಾಗಲೂ ಎಲ್ಲಾ ರೀತಿಯಲ್ಲೂ ಪ್ರಯತ್ನಿಸುತ್ತಿದ್ದ.

ಸ್ವಾಮಿ ವಿವೇಕಾನಂದರು ಇವನ ಬಂಧುಗಳು. ಅವರು ವಿಶ್ವಪ್ರಸಿದ್ಧರಾಗಿ ಅಮೆರಿಕಾದಿಂದ ಹಿಂದಿರುಗಿದ ಮೇಲೆ ರಾಮ ಚಂದ್ರನನ್ನು ನೋಡಲು ಹೋಗಿದ್ದರು. ಆ ವೇಳೆಗೆ ಅವನ ಆರೋಗ್ಯ ಕೆಟ್ಟಿದ್ದು ದುರ್ಬಲನಾಗಿ ಮಲಗಿದ್ದ. ಅವನು ಎದ್ದು ಶೌಚಾಲಯಕ್ಕೆ ಹೋಗಬೇಕಾಗಿತ್ತು. ಹತ್ತಿರ ಯಾರೂ ಇರಲಿಲ್ಲ. ಆಗ ವಿವೇಕಾನಂದರೇ ಅವನ ಕಾಲಿಗೆ ಚಪ್ಪಲಿ ತೊಡಿಸಿ ಕರೆದು ಕೊಂಡು ಹೋದರು. ಸ್ವಾಮೀಜಿಯವರ ನಮ್ರತೆ ನೋಡಿ ಅವರಿ ಗಿಂತ ೧೨ ವರ್ಷ ಹಿರಿಯನಾದ ರಾಮಚಂದ್ರನ ಕಣ್ಣಿನಲ್ಲಿ ನೀರೂರಿತು. ಆಗ ಹೇಳಿದ, ''ಬಿಲೆ (ವಿವೇಕಾನಂದರು ಮಗು ವಾಗಿದ್ದಾಗ ಇಟ್ಟಿದ್ದ ಮುದ್ದಿನ ಹೆಸರು), ನೀನು ಅಮೆರಿಕಾಗೆ ಹೋಗಿ ಜಗತ್ಪ್ರಸಿದ್ಧನಾದ ಮೇಲೆ ನಮ್ಮನ್ನು ಮರೆತಿದ್ದೆ ಎಂದು ಭಾವಿಸಿದ್ದೆ. ಆದರೆ ನೀನು ಎಂದಿನಂತೆ ನನ್ನ ಪುಟ್ಟ ತಮ್ಮ ಬಿಲೆ ಎಂದು ಗೊತ್ತಾಯಿತು.'' ಕಾಲವಾದ ಮೇಲೆ ರಾಮನ ಅವಶೇಷ ವನ್ನು ಯೋಗೋದ್ಯಾನದಲ್ಲಿ ಶ್ರೀರಾಮಕೃಷ್ಣರ ದೇವಸ್ಥಾನದ ಪಕ್ಕದಲ್ಲಿ ಇರಿಸಲಾಯಿತು. 'ನಾನು ಸತ್ತ ಮೇಲೆ ನನ್ನ ದೇಹದ ಬೂದಿಯ ಭಾಗವನ್ನು ಯೋಗೋದ್ಯಾನದ ಪ್ರವೇಶದ್ವಾರದಲ್ಲಿ ಹಾಕಿ. ದ್ವಾರದಲ್ಲಿ ಪ್ರವೇಶಿಸುವ ಶ್ರೀರಾಮಕೃಷ್ಣರ ಭಕ್ತರ ಪಾದ ಗಳು ನನ್ನ ಶಿರಸ್ಸನ್ನು ಸ್ಪರ್ಶಿಸಿದಂತಾಗಲಿ' ಎಂದು ಅವನು ಹೇಳಿದ್ದನಂತೆ.

## ನವಗೋಪಾಲ ಘೋಷ್ ಮತ್ತು ನಿಸ್ತಾರಿಣಿ ದೇವಿ

ನವಗೋಪಾಲ ಘೋಷ್ ಭಕ್ತ. ಸರಳ ಮತ್ತು ಉದಾರಿ; ಬಲಿಷ್ಠ. ಮುಖದಲ್ಲಿ ಸಂತೋಷ ಹೊರಸೂಸುತ್ತಿತ್ತು. ಬ್ರಿಟಿಷ್ ಕಂಪನಿಯೊಂದರಲ್ಲಿ ಉದ್ಯೋಗ. ಹೆಚ್ಚು ಸಂಬಳ. ಇಬ್ಬರು ಹೆಂಡತಿಯರು ಕಾಲವಾದ ಮೇಲೆ ಅವನಿಗೆ ನಿಸ್ತಾರಿಣಿ ದೇವಿ ಯೊಂದಿಗೆ ವಿವಾಹವಾಯಿತು. ಆಕೆಯೂ ಭಕ್ತೆ. ಇವರಿಗೆ ಅನೇಕ ಮಕ್ಕಳಿದ್ದರು. ದಂಪತಿಗಳು ಕಿಶೋರಿ ಮೋಹನ ರಾಯ್ ಎಂಬ ಭಕ್ತನ ಜತೆ ೧೮೮೨ರಲ್ಲಿ ಶ್ರೀರಾಮಕೃಷ್ಣರನ್ನು ನೋಡಲು ಹೋದರು. ಶ್ರೀರಾಮಕೃಷ್ಣರು ಇವರ ಹೆಸರು ಮತ್ತು ವಾಸಸ್ಥಳ ವನ್ನು ವಿಚಾರಿಸಿ, ನಿತ್ಯವೂ ಅವರ ಮನೆಯಲ್ಲಿ ನಾಮಗುಣ

ಕೀರ್ತನೆ ಮಾಡುವಂತೆ ನವಗೋಪಾಲನಿಗೆ ಹೇಳಿದರು. ಆತ ಹಾಗೆಯೇ ಮಾಡಿದ. ನಂತರ ಮೂರು ವರ್ಷ ಶ್ರೀರಾಮಕೃಷ್ಣರನ್ನು ನೋಡಲು ಅವರು ಹೋಗಲೇ ಇಲ್ಲ. ಕಿಶೋರಿ ಒಮ್ಮೆ ದಕ್ಷಿಣೇಶ್ವರಕ್ಕೆ ಹೋದಾಗ ಶ್ರೀರಾಮಕೃಷ್ಣರು, ನವಗೋಪಾಲ ಮತ್ತು ನಿಸ್ತಾರಿಣಿಯನ್ನು ನೆನಪು ಮಾಡಿಕೊಂಡು, ''ಅವರೇಕೆ ಇಷ್ಟು ದಿನ ಬರಲಿಲ್ಲ? ಅವರನ್ನು ಕಂಡರೆ, ಒಮ್ಮೆಯಾದರೂ ಇಲ್ಲಿಗೆ ಬರಲು ಹೇಳು'' ಎಂದರು. ಇದನ್ನು ಕೇಳಿ ನವಗೋಪಾಲನಿಗೆ ಆಶ್ಚರ್ಯವೂ ಸಂತೋಷವೂ ಆಯಿತು. ಶ್ರೀರಾಮಕೃಷ್ಣರು ಎಷ್ಟು ಗೌರವಾನ್ವಿತರು ಮತ್ತು ಅವತಾರ ಪುರುಷರು. ನಮ್ಮಂತಹವರನ್ನು ಇಷ್ಟು ದೀರ್ಘ ಕಾಲದ ನಂತರ ನೆನಪು ಮಾಡಿಕೊಂಡರಲ್ಲಾ ಎಂದು ಅವರ ದಯೆಯನ್ನು ನೆನೆದು ನವಗೋಪಾಲ ಅಶ್ರುಪೂರ್ಣನಾದನು. ತಡಮಾಡದೆ ಹೆಂಡತಿ ಮಕ್ಕಳೊಡನೆ ಶ್ರೀರಾಮಕೃಷ್ಣರನ್ನು ನೋಡಲು ಹೋದನು. ''ಮೊದಲೇ ಏಕೆ ಬರಲಿಲ್ಲ?''ಎಂದು ಶ್ರೀರಾಮಕೃಷ್ಣರು ಕೇಳಿದರು. ಇನ್ನೂ ಮೂರು ಬಾರಿ ಬಂದು ಅವರನ್ನು ನೋಡಿದರೆ ಭಕ್ತಿಯಲ್ಲಿ ಇನ್ನೂ ಮೇಲಿನ ಅವಸ್ಥೆಗೆ ಹೋಗುವುದಕ್ಕೆ ಸಾಕಾಗುತ್ತದೆ ಎಂದು ನವಗೋಪಾಲನಿಗೆ ಸೂಚಿಸಿದರು.

ನವಗೋಪಾಲ ತನ್ನ ಮನೆಯಲ್ಲಿ ಉತ್ಸವವನ್ನು ಅನುಭವಸ್ಥನಾದ ರಾಮಚಂದ್ರ ದತ್ತನ ಸಹಾಯದಿಂದ ಏರ್ಪಡಿಸಿ ಶ್ರೀ ರಾಮಕೃಷ್ಣರನ್ನು ಆಹ್ವಾನಿಸಿದನು. ಪೂಜಾಗೃಹವನ್ನು ಅಲಂಕರಿಸಿ, ಪಂಡಿತರಿಂದ ಭಾಗವತ ಪ್ರವಚನ ಮತ್ತು ವೈಷ್ಣವ ಗಾಯಕರಿಂದ ಕೃಷ್ಣ-ಕೀರ್ತನೆ ಏರ್ಪಡಿಸಿದ್ದನು. ಶ್ರೀರಾಮಕೃಷ್ಣರ ಆಗಮನವಾದ ಕೂಡಲೆ ಪಂಡಿತರು ಓದುವುದನ್ನು ನಿಲ್ಲಿಸಿದರು.


ನವಗೋಪಾಲ

ಅಂಗಳದಲ್ಲಿದ್ದ ಕೀರ್ತನಕಾರರು ಹಾಡಲಾರಂಭಿಸಿದರು. ಪೂಜೆಯ ಹಜಾರಕ್ಕೆ ಶ್ರೀ ರಾಮಕೃಷ್ಣರು ಬಂದು ಕುಳಿತರು. ಇದ್ದಕ್ಕಿದ್ದಂತೆ ಎದ್ದು ಅಂಗಳಕ್ಕೆ ಹೋಗಿ ಕೀರ್ತನಕಾರರ ಬಳಿ ವೇಣುಗೋಪಾಲನ ಭಂಗಿಯಲ್ಲಿ ನಿಂತು ಸಮಾಧಿಸ್ಥರಾದರು. ನವಗೋಪಾಲ, ಕಾಲಿನವರೆಗೂ ಇಳಿಬೀಳುವ ಸುಗಂಧ ಪುಷ್ಪ ಭರಿತ ಹಾರವನ್ನು ಶ್ರೀರಾಮಕೃಷ್ಣರ ಕೊರಳಿಗೆ ಹಾಕಿದನು. ಭಕ್ತರು ಶ್ರೀರಾಮಕೃಷ್ಣರನ್ನು ಸುತ್ತುವರಿದು ಹಾಡಿದರು. ಕೆಲವರಿಗೆ ಭಾವವುಂಟಾಯಿತು. ಶ್ರೀರಾಮಕೃಷ್ಣರು ಪ್ರಕೃತಿಸ್ಥರಾದ ನಂತರ ಆಸೀನರಾದರು. ಇನ್ನೂ ಭಾವಾವಸ್ಥೆಯಲ್ಲಿದ್ದರು. ರಾಮ ನವಗೋಪಾಲನಿಗೆ ವರವನ್ನು ಕೇಳಿಕೊಳ್ಳುವಂತೆ ಹೇಳಿದ. ನವಗೋಪಾಲ ಶ್ರೀರಾಮಕೃಷ್ಣರಿಗೆ ಪ್ರಣಾಮ ಮಾಡಿ, ''ನಾನು ಪ್ರಾಪಂಚಿಕತೆಯಲ್ಲಿ ಮುಳುಗಿದ್ದೇನೆ. ಅದರಿಂದ ಪಾರಾಗುವ ಬಗೆ ತಿಳಿಸಿ'' ಎಂದು ಕೇಳಿದ. ''ನಿನಗೆ ಇನ್ನೇನನ್ನೂ ಮಾಡಲಾಗದಿದ್ದರೆ, ದಿನಕ್ಕೊಮ್ಮೆ ನನ್ನನ್ನು ಸ್ಮರಿಸು'' ಎಂದು ಶ್ರೀರಾಮಕೃಷ್ಣರು ಹೇಳಿದರು. ಆಗ ನವಗೋಪಾಲ ಶ್ರೀರಾಮಕೃಷ್ಣರ ಮುಖದ ಮೇಲೆ ಒಂದು ಬೆಳಕು ಪ್ರಕಾಶವಾಗುತ್ತಿದ್ದುದನ್ನು ನೋಡಿದ. ಅದು ತನ್ನ ನೋಟದ ಭ್ರಮೆ ಇರಬಹುದೆಂದು ಭಾವಿಸಿ ಕಣ್ಣನ್ನು ತೊಳೆದುಕೊಂಡು ಬಂದ. ಮತ್ತೆ ಅದೇ ಬೆಳಕು ಕಾಣಿಸಿತು. 'ಶ್ರೀರಾಮ ಕೃಷ್ಣರ ಮುಖದ ಮೇಲೆ ಏನಾದರೂ ವಿಶೇಷ ಕಾಣುತ್ತಿದೆಯೆ?' ಎಂದು ತನ್ನ ಸಹೋದರರನನ್ನು ಕೇಳಿದ. ಆತ, ''ಇಲ್ಲ, ಅವರು ಎಂದಿನಂತಿರುವರು'' ಎಂದ. ಕೊನೆಗೆ ನವಗೋಪಾಲನಿಗೆ ಹೊಳೆಯಿತು, ಶ್ರೀರಾಮಕೃಷ್ಣರು ತಮ್ಮ ದಿವ್ಯ ಪ್ರಕಾಶದ ರೂಪವನ್ನು ತನಗೆ ತೋರಿದರು ಎಂದು.

ಕೀರ್ತನೆ ಮುಗಿದ ಮೇಲೆ ಶ್ರೀರಾಮಕೃಷ್ಣರು ಒಳಗೆ ಹೋದರು. ಮಹಿಳಾ ಭಕ್ತರು ಅವರಿಗೆ ನಮಸ್ಕರಿಸಿದರು. ನವಗೋಪಾಲನ ಹೆಂಡತಿ ನಿಸ್ತಾರಿಣಿ ತಾನು ತಯಾರಿಸಿದ್ದ ಭೋಜ್ಯಗಳನ್ನು ಒಂದೊಂದಾಗಿ ಶ್ರೀರಾಮಕೃಷ್ಣರಿಗೆ ಬಡಿಸಿದಳು. ಕೊನೆಗೆ ಅವರಿಗೆ ಇಷ್ಟವಾದ ಸಂದೇಶ ಬಡಿಸಿದಳು. ಸಂದೇಶವನ್ನು ತನ್ನ ಕೈಯಿಂದ ಅವರಿಗೆ ತಿನ್ನಿಸಬೇಕೆಂಬ ಬಯಕೆಯಾಯಿತು. ಅವಳ ಆಸೆ ತಿಳಿದವರಂತೆ, ''ಏನು, ನಿನ್ನ ಕೈಯಿಂದ ತಿನ್ನಿಸಬೇಕೆ?'' ಎಂದು ಕೇಳಿ ಒಂದು ಕ್ಷಣ ಬಿಟ್ಟು ನಸುನಕ್ಕು, ''ಆಗಲಿ, ತಿನ್ನಿಸು'' ಎಂದು ಶ್ರೀರಾಮಕೃಷ್ಣರು ಬಾಯಿ ತೆರೆದರು. ನಿಸ್ತಾರಿಣಿ ಸಂದೇಶವನ್ನು ಬಾಯಿಗೆ ಹಾಕಿದಳು. ಒಂದು ವಿಚಿತ್ರ ಶಕ್ತಿ, ಕುಂಡಲಿನಿ, ಅದನ್ನು ನುಂಗಿದುದನ್ನು ನೋಡಿ ತಲ್ಲಣಗೊಂಡು ಬಾಯಿಗೆ ಹಾಕುವುದನ್ನು ನಿಲ್ಲಿಸಿದಳು. ಶ್ರೀರಾಮಕೃಷ್ಣರು ನಿಧಾನವಾಗಿ ತಾವೇ ತಿಂದು ಪ್ರಸಾದವನ್ನು ನಿಸ್ತಾರಿಣಿಗೆ ಕೊಟ್ಟರು. ಅವಳು, ಇತರ ಅತಿಥಿಗಳಿಗೆ ಬಡಿಸುವ ಮುನ್ನ ತಾನು ತಿನ್ನಲು ಹಿಂಜರಿದಳು. ಆದರೆ ಶ್ರೀರಾಮಕೃಷ್ಣರು ಪ್ರಸಾದವನ್ನು ತಿನ್ನುವಂತೆ ಒತ್ತಾಯಪಡಿಸಿದರು. ಅವರ ಇಚ್ಛೆಯಂತೆ ತಾನು ತಿಂದು ಉಳಿದುದನ್ನು ಭಕ್ತರಿಗೆ ಕಳುಹಿಸಿದಳು. ನಿಸ್ತಾರಿಣಿ ಶ್ರೀರಾಮ ಕೃಷ್ಣರ ಬಾಯಲ್ಲಿ ಕಂಡ ವಿಷಯ ಬೇಗನೆ ಹರಡಿ ಭಕ್ತರಲ್ಲಿ ಉದ್ಗಾರ ಜೋರಾಗಿ ಪ್ರಸಾದವನ್ನು ಕೂಡಲೆ ಹಂಚಿಕೊಂಡರು. ಗದ್ದಲ ಕೇಳಿಸಿಕೊಂಡ ಶ್ರೀರಾಮಕೃಷ್ಣರು, ''ಅದಕ್ಕೇ ನಾನು ಹೇಳಿದ್ದು, ಮೊದಲು ನೀನು ಪ್ರಸಾದವನ್ನು ತಿನ್ನು ಎಂದು, ಇಲ್ಲವಾದರೆ ನಿನಗೆ ಏನೂ ಉಳಿಯುವುದಿಲ್ಲವೆಂದು ನನಗೆ ಗೊತ್ತಿತ್ತು'' ಎಂದು ಹೇಳಿದರು.

ಒಮ್ಮೆ ಶ್ರೀರಾಮಕೃಷ್ಣರ ಕೊಠಡಿಯಲ್ಲಿ ಒಂದು ಬೆಕ್ಕು ತನ್ನ ಮರಿಗಳೊಂದಿಗೆ ಇತ್ತು. ಕೆಲವು ವೇಳೆ ತಾಯಿ ಬೆಕ್ಕು ಅವರ ಹಾಸಿಗೆಯ ಮೇಲೆ ಅವರ ಕಾಲಿನ ಹತ್ತಿರ ನಿದ್ರಿಸುತ್ತಿತ್ತು. ಅವರು ಎದ್ದು ಅದರ ಮೈ ತಡವಿದರೆ ಅದೂ ಎದ್ದು ಪ್ರಣಾಮ ಮಾಡುವಂತೆ ಅವರ ಕಾಲಿನ ಮೇಲೆ ಕೈ ಇಡುತ್ತಿತ್ತು. ಬೆಕ್ಕಿನ ಸಂಸಾರವನ್ನು ಏನು ಮಾಡುವುದು ಎಂದು ತೋಚದೆ ಶ್ರೀರಾಮಕೃಷ್ಣರು ಯೋಚಿಸುತ್ತಿದ್ದರು, ಏಕೆಂದರೆ ದೇವಸ್ಥಾನದಲ್ಲಿ ಅವಕ್ಕೆ ಸರಿ



ನಿಸ್ತಾರಿಣಿ ದೇವಿ

ಯಾದ ಆಹಾರ ದೊರೆಯುತ್ತಿರಲಿಲ್ಲ. ಒಮ್ಮೆ ನಿಸ್ತಾರಿಣಿ ಶ್ರೀರಾಮ ಕೃಷ್ಣರನ್ನು ನೋಡಲು ಹೋದಾಗ, ''ನನಗೊಂದು ಕೆಲಸ ಮಾಡಿಕೊಡುವೆಯಾ?'' ಎಂದು ಕೇಳಿದರು. ಈಕೆ ತನ್ನ ಕೈಗಳನ್ನು ಜೋಡಿಸಿ, ''ಅದೇನೇ ಇರಲಿ ಮಾಡುತ್ತೇನೆ, ಹೇಳಿ'' ಎಂದಳು. ಅವರು ಮತ್ತೆ ಅದೇ ಪ್ರಶ್ನೆ ಕೇಳಿದರು. ಈಕೆ ಅದೇ ಉತ್ತರ ಕೊಟ್ಟಳು. ಅವರು ಬೆಕ್ಕಿನ ವಿಷಯ ತಿಳಿಸಿ, ಅವನ್ನು ಅವಳೊಡನೆ ತೆಗೆದುಕೊಂಡು ಹೋಗುವಂತೆ ಹೇಳಿದರು. ''ನೆನಪಿರಲಿ, ಅವು ನನ್ನಲ್ಲಿ ಶರಣಾಗಿವೆ. ಅವನ್ನು ಅತ್ಯಂತ ಚೆನ್ನಾಗಿ ನೋಡಿಕೊಳ್ಳಬೇಕು'' ಎಂದು ಹೇಳಿದರು. ನಿಸ್ತಾರಿಣಿ ಅವರನ್ನು ನೋಡಲು ಹೋದಾಗಲೆಲ್ಲ ಬೆಕ್ಕುಗಳ ಬಗ್ಗೆ, ಅವಕ್ಕೆ ಸರಿಯಾದ ಆಹಾರ ದೊರೆಯುತ್ತಿದೆಯೆ, ಮರಿಗಳು ಬೆಳೆಯುತ್ತಿವೆಯೆ, ನಿಸ್ತಾರಿಣಿ ಅವುಗಳೊಂದಿಗೆ ಏನು ಮಾಡುತ್ತಿರುವಳು ಎಂಬುದನ್ನೆಲ್ಲಾ ವಿವರವಾಗಿ ಕೇಳಿ ತಿಳಿದುಕೊಳ್ಳುತ್ತಿದ್ದರು. ಸರಿಯಾಗಿ ನೋಡಿಕೊಳ್ಳದೆ ಮತ್ತಾರಿಗಾದರೂ ಅವನ್ನು ಕೊಟ್ಟುಬಿಡುವಳೊ ಎಂಬ ಆತಂಕ ಅವರಿಗಿರುತ್ತಿತ್ತು. 'ನೆನಪಿರಲಿ, ಅವು ನನ್ನಲ್ಲಿ ಶರಣಾಗಿವೆ' ಎಂದು ಮತ್ತೊಮ್ಮೆ ಅವಳನ್ನು ಎಚ್ಚರಿಸುತ್ತಿದ್ದರು. ತಾಯಿ ಬೆಕ್ಕು ಮತ್ತೆ ಮರಿ ಹಾಕಲಿಲ್ಲ. ಒಂದು ವರ್ಷದ ನಂತರ ಕಾಯಿಲೆಯಾಗಿ ಅದು ಸತ್ತಿತು. ಸಾಯುವಾಗ ಅದರ ಬಾಯಿಗೆ ನಿಸ್ತಾರಿಣಿ ಗಂಗಾಜಲ ಹಾಕಿ, ಶ್ರೀರಾಮಕೃಷ್ಣರ ಹೆಸರನ್ನು ಹಲವು ಬಾರಿ ಉಚ್ಚರಿಸಿದಳು. ತನ್ನಲ್ಲಿ ಶರಣಾದವರನ್ನು, ಅವರು ಮನುಷ್ಯರಾಗಲಿ, ಪ್ರಾಣಿಗಳಾಲಿ, ಅವತಾರ ಪುರುಷರು ಹೇಗೆ ರಕ್ಷಿಸುವರು ಎಂಬುದನ್ನು ತಿಳಿಸಲು ನಿಸ್ತಾರಿಣಿ ಈ ಮನಮುಟ್ಟುವ ಘಟನೆಯನ್ನು ಸೋದರಿ ದೇವಮಾತೆಗೆ ಹೇಳಿದಳಂತೆ.

ತನಗೇನಾದರೂ ಗಂಡು ಮಗು ಜನಿಸುವುದಾದರೆ ಅದನ್ನು ಶ್ರೀರಾಮಕೃಷ್ಣರ ಸೇವೆಗೆ ಅರ್ಪಿಸುವುದಾಗಿ ನಿಸ್ತಾರಿಣಿ ಸಂಕಲ್ಪ ಮಾಡಿಕೊಂಡಿದ್ದಳಂತೆ. ಗಂಡು ಮಗುವೇ ಜನಿಸಿತು. ತನ್ನ ಮನಸ್ಸಿನಂತೆ, ಹದಿನೈದು ದಿನದ ಶಿಶುವನ್ನು ಬಟ್ಟೆಯಲ್ಲಿ ಸುತ್ತಿಕೊಂಡು ನವಗೋಪಾಲನೊಂದಿಗೆ ದಕ್ಷಿಣೇಶ್ವರಕ್ಕೆ ಹೋದಳು. ಶ್ರೀರಾಮಕೃಷ್ಣರು ಒಬ್ಬರೇ ಭಾವದಲ್ಲಿ ನಿಂತಿದ್ದರು. ಇವರನ್ನು ನೋಡಿದ ಕೂಡಲೆ, ''ಓ, ನನಗೇನನ್ನು ತಂದಿರುವೆ?'' ಎಂದು ನಿಸ್ತಾರಿಣಿಯನ್ನು ಕೇಳಿದರು. ''ನಿಮಗೆ ನಿವೇದಿಸಲು ಇದನ್ನು ತಂದಿರುವೆ'' ಎಂದು ಮಗುವನ್ನು ಶ್ರೀರಾಮಕೃಷ್ಣರ ಪಾದಗಳ ಬಳಿ ಇಟ್ಟಳು. ಶ್ರೀರಾಮಕೃಷ್ಣರು ಕೆಲವು ಕ್ಷಣ ಮಗುವನ್ನು ನೋಡಿ, ''ಆಹಾ, ಎಷ್ಟು ಮುದ್ದಾದ ಮಗು! ನನಗೆ ಕೊಡುತ್ತಿರುವೆಯಾ? ಒಳ್ಳೆಯದು!'' ಎಂದು ಹೇಳಿ ತಮ್ಮ ತೊಡೆಯ ಮೇಲೆ ಇಟ್ಟುಕೊಂಡು ತಮ್ಮ ಬಲಗೈಯನ್ನು ಆಶೀರ್ವಾದದಂತೆ ತಲೆಯ ಮೇಲೆ ಸವರಿ ತಾಯಿಯ ತೋಳುಗಳ ಮೇಲಿಟ್ಟು, ''ಮಗುವನ್ನು ಈಗ ನೀನು ಸಾಕು, ಆದರೆ ಇದು ನನಗೆ ಸೇರಿದೆ ಎಂಬುದು ತಿಳಿದಿರಲಿ. ಕಾಲಕ್ರಮದಲ್ಲಿ ಇದನ್ನು ನಾನು ತೆಗೆದುಕೊಳ್ಳುತ್ತೇನೆ'' ಎಂದು ಹೇಳಿದರು. ವರ್ಷಗಳ ನಂತರ ನಿರೋದೆ ಎಂಬ ಹೆಸರಿನ ಈ ಮಗು ಶ್ರೀರಾಮಕೃಷ್ಣ ಮಿಷನ್ನಿಗೆ ಸೇರಿ ಅಂದಿನ ಅಧ್ಯಕ್ಷರಾಗಿದ್ದ ಸ್ವಾಮಿ ಬ್ರಹ್ಮಾನಂದರಿಂದ 'ಸ್ವಾಮಿ ಅಂಬಿಕಾನಂದ' ಎಂಬ ಸಂನ್ಯಾಸನಾಮ ಪಡೆಯಿತು. ಅಂಬಿಕಾನಂದರು ಮಧುರ ಕಂಠದಿಂದ ಭಕ್ತಿಪೂರ್ಣವಾಗಿ ಹಾಡುತ್ತಿದ್ದದರಿಂದ ಸ್ವಾಮಿ ಬ್ರಹ್ಮಾನಂದರು ಬೆಳಗಿನ ಧ್ಯಾನಾನಂತರ ಅವರಿಂದ ಹಾಡಿಸುತ್ತಿದ್ದರು ಮತ್ತು ಹೊರಗಡೆ ಹೋದಾಗ ಅವರನ್ನು ತಮ್ಮೊಡನೆ ಕರೆದೊಯ್ಯುತ್ತಿದ್ದರು.

ನವಗೋಪಾಲ ಶ್ರೀರಾಮಕೃಷ್ಣಪುರ ಎಂಬಲ್ಲಿ ಹೊಸ ಮನೆಗೆ ಸ್ಥಳಾಂತರಿಸಿದ ಮೇಲೆ ಅಲ್ಲಿ ಶ್ರೀರಾಮಕೃಷ್ಣರ ಪಿಂಗಾಣಿ ವಿಗ್ರಹವನ್ನು ದೇವರ ಮನೆಯಲ್ಲಿ ಸ್ಥಾಪಿಸಲು ಸ್ವಾಮಿ ವಿವೇಕಾನಂದರನ್ನು ೧೮೯೮ರಲ್ಲಿ ಕೇಳಿಕೊಂಡನು. ಸ್ವಾಮೀಜಿ, ಶ್ರೀರಾಮಕೃಷ್ಣರ ಇತರ ಶಿಷ್ಯರೊಡನೆ ಬೇಲೂರು ಮಠದಿಂದ ಶ್ರೀರಾಮಕೃಷ್ಣಪುರದ ಘಾಟಿಗೆ ಬಂದರು. ಅವರು ಕಾವಿಬಟ್ಟೆಯುಟ್ಟು ರುಮಾಲು ಸುತ್ತಿಕೊಂಡಿದ್ದರು. ಸ್ವಾಮೀಜಿಯವರನ್ನು ನೋಡಲು ಜನ ದಾರಿಯ ಇಕ್ಕೆಲಗಳಲ್ಲಿ ನಿಂತಿದ್ದರು. ಸ್ವಾಮೀಜಿ ಬರಿಗಾಲಿನಲ್ಲಿ ಶ್ರೀರಾಮಕೃಷ್ಣರ ಭಜನೆ ಹಾಡುತ್ತ ಮೃದಂಗ ಬಾರಿಸುತ್ತ ನವಗೋಪಾಲನ ಮನೆ ತಲುಪಿದರು. ನವಗೋಪಾಲ ಮತ್ತು ನಿಸ್ತಾರಿಣಿ ಸ್ವಾಮೀಜಿಯವರನ್ನು ಸ್ವಾಗತಿಸಿದರು. ಅಲ್ಲಿ ಮಾಡಿದ್ದ ಅಲಂಕಾರ, ವ್ಯವಸ್ಥೆಯನ್ನು ಸ್ವಾಮೀಜಿ ಶ್ಲಾಘಿಸಿದರು. ಶ್ರೀರಾಮಕೃಷ್ಣರ ಪೂಜೆ ಮತ್ತು ಸೇವೆಯನ್ನು ಮಾಡಲು ತಾವು ಶಕ್ತರಲ್ಲ, ತಮಗೊಂದು ಬಡ ಮನೆ ಮತ್ತು ಅಲ್ಪ ಶಕ್ತಿ ಇವೆ. ನೀವು ದಯವಿಟ್ಟು ಶ್ರೀರಾಮಕೃಷ್ಣರನ್ನು ಸ್ಥಾಪಿಸಿ ಎಂದು ದಂಪತಿ ಕೇಳಿಕೊಂಡರು. ''ನಿಮ್ಮ ಗುರುಮಹಾರಾಜರು ಹದಿನಾಲ್ಕು ತಲೆಮಾರುಗಳಿಂದ ಅಮೃತಶಿಲೆ ಹಾಸಿದ ಕೊಠಡಿಯಲ್ಲಿ ವಾಸಿಸಿಲ್ಲ! ಹಳ್ಳಿಯ ಮುರುಕಲು ಗುಡಿಸಿಲಿನಲ್ಲಿ ಹುಟ್ಟಿ ಅನುಕೂಲವನ್ನು ಲೆಕ್ಕಿಸದೆ ತಮ್ಮ ಕಾಲ ಕಳೆದರು. ಇಷ್ಟು ಸೊಗಸಾದ ಸೇವೆ ಮಾಡುವಲ್ಲಿ ವಾಸಿಸದೆ ಮತ್ತೆಲ್ಲಿ ಅವರು ವಾಸಿಸುವರು?'' ಎಂದು ಸ್ವಾಮೀಜಿ ಹೇಳಿದುದಕ್ಕೆ ಎಲ್ಲರೂ ನಕ್ಕರು. ಪೂಜಾಗೃಹದಲ್ಲಿ ಶ್ರೀರಾಮಕೃಷ್ಣರ ಸ್ಥಾಪನೆ ಮಾಡಿದ ನಂತರ ಸಮಯಸ್ಫೂರ್ತಿಯಿಂದ, ''**ಓಂ ಸ್ಥಾಪಕಾಯ ಚ ಧರ್ಮಸ್ಯ ಸರ್ವಧರ್ಮಸ್ವರೂಪಿಣೇ। ಅವತಾರ ವರಿಷ್ಠಾಯ ರಾಮಕೃಷ್ಣಾಯ ತೇ ನಮಃ॥**'' ಎಂಬ ಪ್ರಣಾಮ ಮಂತ್ರವನ್ನು ಅಲ್ಲಿಯೇ ರಚಿಸಿ, ಹಾಡಿ ಪ್ರಣಾಮ ಮಾಡಿದರು.

ನವಗೋಪಾಲ ೧೯೦೯ರಲ್ಲಿ ಕಾಲವಾದನು. ನಂತರ ನಿಸ್ತಾರಿಣಿ ೨೩ ವರ್ಷಗಳು ಜೀವಿಸಿದ್ದಳು. ಶ್ರೀರಾಮಕೃಷ್ಣರ ಸಂನ್ಯಾಸಿ

ಶಿಷ್ಯರು ಮತ್ತು ಶ್ರೀಶಾರದಾದೇವಿಯವರೊಂದಿಗೆ ನಿಕಟ ಸಂಪರ್ಕ ಹೊಂದಿದ್ದಳು. ಮಠದಲ್ಲಿ ಸಂನ್ಯಾಸಿಗಳು ಕಾಯಿಲೆ ಬಿದ್ದರೆ ಅವರನ್ನು ಮನೆಗೆ ಕರೆತಂದು ಶುಶ್ರೂಷೆ ಮಾಡುತ್ತಿದ್ದಳು. ಆಕೆಯ ಮಗ ಶ್ರೀರಾಮಕೃಷ್ಣ ಮಠದಲ್ಲಿ ಸಂನ್ಯಾಸಿಯಾಗಿದ್ದುದರಿಂದ ಇತರ ಸಂನ್ಯಾಸಿಗಳು ಅವಳೊಂದಿಗೆ ಗೌರವದಿಂದ ಸಂಕೋಚವಿಲ್ಲದೆ ನಡೆದುಕೊಳ್ಳುತ್ತಿದ್ದರು. ಸ್ವಾಮಿ ಬ್ರಹ್ಮಾನಂದರೂ ಕೂಡ ಆಗಾಗ ಇವರ ಮನೆಗೆ ಬರುತ್ತಿದ್ದರು. ನಿಸ್ತಾರಿಣಿ, ಶ್ರೀರಾಮಕೃಷ್ಣರು ಕೊಟ್ಟ ಬೆಕ್ಕುಗಳ ಜವಾಬ್ದಾರಿಯನ್ನು ತೆಗೆದುಕೊಂಡಿದ್ದರಿಂದ ಶ್ರೀರಾಮಕೃಷ್ಣರು, ''ನಿನಗೆ ಎಲ್ಲಾ ಒಳ್ಳೆಯದಾಗಲಿ, ಇಷ್ಟದೇವತೆಯ ದರ್ಶನವಾಗಲಿ'' ಎಂದು ಹರಸಿದ್ದರು. ಕಾಲಾನಂತರ ಒಂದು ದಿನ ನಿಸ್ತಾರಿಣಿ ಇಷ್ಟಮಂತ್ರವನ್ನು ಜಪಿಸುತ್ತಿರುವಾಗ ಅವಳ ಇಷ್ಟದೇವತೆಯಾದ ರಾಮಚಂದ್ರ ಇವಳ ಮುಂದೆ ನಿಂತುದನ್ನು ನೋಡಿದಳು. ಅವನ ಪಾದಧೂಳಿಯನ್ನು ತೆಗೆದುಕೊಳ್ಳುವಷ್ಟರಲ್ಲಿ ರಾಮಚಂದ್ರನ ಬದಲು ತನ್ನ ಪ್ರಿಯ ಗುರು ಶ್ರೀರಾಮಕೃಷ್ಣರನ್ನು ಕಂಡಳು. ಆಗ ಶ್ರೀರಾಮಕೃಷ್ಣರು ನಗುತ್ತಾ, ''ಈಗ ನಾನಾರೆಂದು ನಿನಗೆ ತಿಳಿಯಿತು'' ಎಂದರು. ನಿಸ್ತಾರಿಣಿ ತನ್ನ ಕೊನೆಗಾಲದಲ್ಲಿ ಶ್ರೀರಾಮಕೃಷ್ಣರ ಚಿತ್ರವನ್ನು ಎದೆಗೊತ್ತಿಕೊಂಡು ಅವರ ಹೆಸರನ್ನು ಜಪಿಸುತ್ತಾ ಅಸುನೀಗಿದಳು. ''ಅವಳು ಮಹಾತ್ಮಳು. ದೇವಿಯ ಹತ್ತು ರೂಪಗಳಲ್ಲಿ ಒಂದರ ಅಂಶ ಅವಳು. ಅವಳ ಪ್ರಭಾವದಿಂದ ನವಗೋಪಾಲ ಮಾಯೆಯಿಂದ ಪಾರಾದ'' ಎಂದು ಶ್ರೀರಾಮಕೃಷ್ಣರು ಆಕೆಯ ಬಗ್ಗೆ ಹೇಳಿದ್ದರು.

## ಸುರೇಂದ್ರನಾಥ ಮಿತ್ರ

ಈತ ಶ್ರೀರಾಮಕೃಷ್ಣರ ಮೂರನೆಯ ರಸದ್ದಾರ್. ಸುಂದರ, ದೃಢಕಾಯ. ಒಳ್ಳೆಯ ನೌಕರಿ ಮತ್ತು ಸಂಬಳ. ಸ್ನೇಹಿತರೊಂದಿಗೆ ಮೋಜು. ಮದುವೆಯಾಗಿತ್ತು. ಮಕ್ಕಳಿಲ್ಲ. ಆದರೆ ದಿಟ್ಟ, ಬಿಚ್ಚು ಮನಸ್ಸು ಮತ್ತು ವಿಶಾಲಹೃದಯಿ. ಕಾಳಿಯ ಭಕ್ತ. ಇಂದ್ರಿಯ ಲೋಲುಪತೆಯಿಂದ ಅಶಾಂತಿ ತಲೆದೋರಿತು. ಆತ್ಮಹತ್ಯೆಯ ಯೋಚನೆಯೂ ಬಂದಿತ್ತು. ಆ ಸಮಯದಲ್ಲಿ ಭೈರವಿಯೊಬ್ಬಳು (ತಾಂತ್ರಿಕ ಸಾಧಕಿ) ಎದುರಾಗಿ, ''ಮಗು, ದೇವರೊಬ್ಬನೆ ಸತ್ಯ, ಉಳಿದುದೆಲ್ಲವೂ ಅಸತ್ಯ'' ಎಂದು ಹೇಳಿದಳು. ಅಧೋಗತಿಯಿಂದ ಮೇಲೇಳಲು ಶಕ್ತಿ ದೊರೆತಂತಾಯಿತು. ಶ್ರೀರಾಮಕೃಷ್ಣರ ನಿಷ್ಠಾವಂತ ಭಕ್ತನೂ ಇವನ ಓರಗೆಯವನೂ ಆದ ರಾಮ ಚಂದ್ರ ದತ್ತ ಇವನ ಮನೆಯ ಹತ್ತಿರವಿದ್ದ. ಇವನ ಮನಃಸ್ಥಿತಿ ನೋಡಿ ಶ್ರೀರಾಮಕೃಷ್ಣರ ಬಳಿಗೆ ಹೋಗಲು ಸೂಚಿಸಿದ. ಸುರೇಂದ್ರ ನಿರಾಕರಿಸಿದ. ರಾಮಚಂದ್ರನ ಒತ್ತಾಯ ಹೆಚ್ಚಾದ ಮೇಲೆ ಶ್ರೀರಾಮಕೃಷ್ಣರ ಬಳಿ ಹೋಗಲೊಪ್ಪಿದ. ''ನಿಮ್ಮ ಸಾಧು ನಕಲಿಯಾದರೆ ನಿನ್ನ ಕಿವಿ ಹಿಂಡುತ್ತೇನೆ'' ಎಂದ. ಇಬ್ಬರೂ ದಕ್ಷಿಣೇಶ್ವರಕ್ಕೆ ಹೋದರು. ಕೊಠಡಿ ಜನರಿಂದ ತುಂಬಿತ್ತು. ಸುರೇಂದ್ರ ಶ್ರೀರಾಮಕೃಷ್ಣರಿಗೆ ನಮಸ್ಕರಿಸದೆ ಕುಳಿತ. ಶ್ರೀರಾಮ ಕೃಷ್ಣರು ಹೇಳುತ್ತಿದ್ದರು:


ಸುರೇಂದ್ರನಾಥ ಮಿತ್ರ

''ಮನುಷ್ಯ ಬೆಕ್ಕಿನ ಮರಿಯಂತೆ ವರ್ತಿಸದೆ ಕೋತಿಮರಿಯಂತೆ ಏಕೆ ನಡೆದುಕೊಳ್ಳುತ್ತಾನೆ? ತಾಯಿ ಓಡಾಡುವಾಗ ಕೋತಿ ಮರಿ ತಾಯಿಯನ್ನು ಹಿಡಿದುಕೊಂಡಿರುತ್ತದೆ, ಕೈ ಜಾರಿ ಬೀಳುವ ಸಾಧ್ಯತೆ ಇದೆ. ಆದರೆ ಬೆಕ್ಕಿನ ಮರಿಯನ್ನು ತಾಯಿ ಕಚ್ಚಿಕೊಂಡಿರುತ್ತದೆ. ತಾಯಿ ಇಟ್ಟ ಕಡೆ ಅದು ಇರುತ್ತದೆ. ಇದೇ ವ್ಯತ್ಯಾಸ, ಮನುಷ್ಯ ತಾನೇ ಪ್ರಯತ್ನಿಸುವುದಕ್ಕೂ ಮತ್ತು ಭಗವಂತನ ಇಚ್ಛೆಗೆ ತನ್ನನ್ನು ಅರ್ಪಿಸಿಕೊಳ್ಳುವುದಕ್ಕೂ.'' ಶ್ರೀರಾಮ ಕೃಷ್ಣರ ಮಾತುಗಳು ಸುರೇಂದ್ರನ ಮನಸ್ಸಿನ ಮೇಲೆ ಗಾಢವಾದ ಪರಿಣಾಮ ಉಂಟುಮಾಡಿದುವು. ಮನಸ್ಸು ಹಗುರವಾಗಿ ಶಕ್ತಿ ಬಂದಂತಾಯಿತು. ಮನಸಾರೆ ಶ್ರೀರಾಮಕೃಷ್ಣರಿಗೆ ವಂದಿಸಿ ಹೊರಟ. ಆಗ, ''ಮತ್ತೆ ಬಾ'' ಎಂದು ಶ್ರೀರಾಮಕೃಷ್ಣರು ಹೇಳಿದರು. ದಾರಿಯಲ್ಲಿ, ''ಅವರು ನನ್ನ ಕಿವಿ ಹಿಂಡಿದರು'' ಎಂದು ರಾಮಚಂದ್ರನಿಗೆ ಹೇಳಿದ.

ಪ್ರಥಮ ಭೇಟಿಯಲ್ಲೇ ಸುರೇಂದ್ರ ಶ್ರೀರಾಮಕೃಷ್ಣರಿಗೆ ಆಕರ್ಷಿತನಾದ. ಪ್ರತಿ ಭಾನುವಾರ ದಕ್ಷಿಣೇಶ್ವರಕ್ಕೆ ಹೋಗಲಾರಂಭಿಸಿದ. ಅವನ ದುಶ್ಚಟಗಳು ಅವನನ್ನು ಬಿಟ್ಟಿರಲಿಲ್ಲ. ಅಪಖ್ಯಾತಿಯ ಮನೆಗಳಿಗೆ ಹೋದಾಗ ಕೆಲಸದ ನೆಪ ಹೇಳಿ ದಕ್ಷಿಣೇಶ್ವರಕ್ಕೆ ಹೋಗುವುದನ್ನು ತಪ್ಪಿಸಿಕೊಳ್ಳುತ್ತಿದ್ದ. ಇದರ ಬಗ್ಗೆ ರಾಮಚಂದ್ರ ದತ್ತ ಶ್ರೀರಾಮಕೃಷ್ಣರಿಗೆ ಹೇಳಿದಾಗ ಅವರು, ''ಇನ್ನೂ ಸ್ವಲ್ಪ ಕಾಲ ಅವನು ಸುಖಿಸಲಿ. ನಂತರ ಅವನು ಶುದ್ಧನಾಗುವನು'' ಎಂದು ಹೇಳಿದರು. ಇದು ಸುರೇಂದ್ರನಿಗೆ ತಿಳಿದಾಗ ಅವನು ಧೈರ್ಯಮಾಡಿ ದಕ್ಷಿಣೇಶ್ವರಕ್ಕೆ ಹೋದ. ಸಂಕೋಚದಿಂದ ದೂರ ಕುಳಿತ. ಶ್ರೀರಾಮಕೃಷ್ಣರು ಪ್ರೀತಿಯಿಂದ, ''ನೀನೇಕೆ ಬಂದು ನನ್ನ ಹತ್ತಿರ ಕುಳಿತುಕೊಳ್ಳಬಾರದು? ಕಳ್ಳನಂತೆ ಒಂಟಿಯಾಗಿ ಏಕೆ ಕುಳಿತಿರುವೆ?'' ಎಂದರು. ಸುರೇಂದ್ರ ಎದ್ದು ಹತ್ತಿರ ಕುಳಿತ. ಶ್ರೀರಾಮಕೃಷ್ಣರು ಭಾವಮುಖದಲ್ಲಿ, ''ಒಬ್ಬ ಮನುಷ್ಯ ಕೆಟ್ಟ ಸ್ಥಳಕ್ಕೆ ಹೋದರೆ, ಜಗನ್ಮಾತೆಯನ್ನೇಕೆ ಕರೆದೊಯ್ಯಬಾರದು? ಅವಳು ಅನೇಕ ದುಷ್ಕರ್ಮಗಳಿಂದ ಅವನನ್ನು ರಕ್ಷಿಸುತ್ತಾಳೆ'' ಎಂದರು. ಶ್ರೀರಾಮ ಕೃಷ್ಣರು ಯಾರನ್ನು ಉದ್ದೇಶಿಸಿ ಹೇಳುತ್ತಿದ್ದಾರೆ ಎಂಬುದು ಬಹುಶಃ ಸುರೇಂದ್ರನೊಬ್ಬನಿಗೆ ಮಾತ್ರ ಅರ್ಥವಾಗಿರಬೇಕು. ಅವನ ಅಂತರಾತ್ಮ ಅವನನ್ನು ಮುಳ್ಳಿನಂತೆ ಚುಚ್ಚುತ್ತಿತ್ತು. ಶ್ರೀರಾಮಕೃಷ್ಣರು ಮುಂದುವರಿಸಿದರು. ''ಪ್ರತಿಯೊಬ್ಬರಿಗೂ ಸ್ವಲ್ಪ ಪುರುಷತ್ವ ಇರಬೇಕು.'' ಇದ್ದಕ್ಕಿದ್ದಂತೆ ಸುರೇಂದ್ರನ ಕಡೆ ತಿರುಗಿ ಹೇಳಿದರು, ''ಸುಖಪಡುವುದಕ್ಕೆ ಹೋರಾಡುವುದಲ್ಲ. ಅದು ಮನುಷ್ಯನನ್ನು ಕೆಳಗೆಳೆಯುವುದು. ಅದು ಪ್ರಾಣಿಗಳಿಗೂ

ಇದೆ. ಅರ್ಜುನನಂತಹ ವೀರನಾಗುವುದಕ್ಕೆ, ಒಂದು ಆದರ್ಶಕ್ಕಾಗಿ ಕೊನೆಯ ಉಸಿರಿರುವವರೆಗೂ ಬದ್ಧನಾಗಿರುವುದಕ್ಕೆ ಸ್ವಲ್ಪ ಪುರುಷತ್ವ ಎಲ್ಲರಿಗೂ ಬೇಕು.'' ಶ್ರೀರಾಮಕೃಷ್ಣರು ಎಲ್ಲ ಭಕ್ತರೆದುರಿಗೆ ತನ್ನ ತಪ್ಪುಗಳನ್ನು ಬಯಲಿಗೆಳೆಯುವರೇನೋ ಎಂದು ಸುರೇಂದ್ರನಿಗೆ ದಿಗಿಲಾಯಿತು. ಆದರೆ ಶ್ರೀರಾಮಕೃಷ್ಣರು ಅಷ್ಟಕ್ಕೆ ನಿಲ್ಲಿಸಿದರು. ಅವನ ದುಶ್ಚಟಗಳ ವಿರುದ್ಧ ಹೋರಾಡುವುದಕ್ಕೆ ಈ ಬುದ್ಧಿವಾದ ಅವನಿಗೆ ಬಹಳ ಸಹಾಯಕವಾಯಿತು.

ಸುರೇಂದ್ರ ಜಗನ್ಮಾತೆ ಕಾಳಿಯ ಭಕ್ತ. ಮನೆಯಲ್ಲಿ ಕಾಳಿಗೆ ಪೂಜಾಗೃಹ ಮಾಡಿ ಪ್ರೀತಿಯಿಂದ ಪೂಜಿಸುತ್ತಿದ್ದ. ಅವನಿಗೆ ಶ್ರೀರಾಮಕೃಷ್ಣರು ಒಮ್ಮೆ ಹೇಳಿದರು: ''ಜಗನ್ಮಾತೆಯ ಭಕ್ತ ಧರ್ಮ ಮತ್ತು ಮೋಕ್ಷಗಳನ್ನು ಪಡೆಯುತ್ತಾನೆ. ಅವನು ಅರ್ಥ ಮತ್ತು ಕಾಮವನ್ನೂ ಅನುಭವಿಸುತ್ತಾನೆ.'' ಸುರೇಂದ್ರ ತನ್ನ ಶಕ್ತಿಯನ್ನೆಲ್ಲಾ ಆಧ್ಯಾತ್ಮಿಕ ಸಾಧನೆಯ ಕಡೆ ತಿರುಗಿಸಿದ. ಆದರೂ ಕುಡಿಯುವ ಅಭ್ಯಾಸವನ್ನು ಬಿಡಲಾಗಲಿಲ್ಲ. ಒಮ್ಮೆ ರಾಮಚಂದ್ರ ಮತ್ತು ಸುರೇಂದ್ರ ದಕ್ಷಿಣೇಶ್ವರಕ್ಕೆ ಹೋದಾಗ ಶ್ರೀರಾಮಕೃಷ್ಣರು ಬಕುಳ ವೃಕ್ಷದ ಕೆಳಗೆ ಕುಳಿತು ಉನ್ನತಾವಸ್ಥೆಯಲ್ಲಿದ್ದುದನ್ನು ಕಂಡರು. ಶ್ರೀರಾಮಕೃಷ್ಣರಿಗೆ ನಮಸ್ಕರಿಸಿದರು. ಶ್ರೀರಾಮಕೃಷ್ಣರು ಸುರೇಂದ್ರನಿಗೆ ಹೇಳಿದರು, ''ನೀನು ಮದ್ಯವನ್ನು ಕುಡಿಯುವಾಗ ಅದನ್ನು ಸಾಧಾರಣ ಮದ್ಯವೆಂದು ತಿಳಿದುಕೊಳ್ಳಬೇಕೆ? ಮೊದಲು ಅದನ್ನು ತಾಯಿ ಕಾಳಿಗೆ ಅರ್ಪಿಸಿ ನಂತರ ಅದನ್ನು ಪ್ರಸಾದವಾಗಿ ಕುಡಿ. ಮತ್ತನಾಗದಂತೆ ಎಚ್ಚರ ವಹಿಸು, ಅಷ್ಟೆ. ಎಡವಿ ಬೀಳಬೇಡ, ಮನಸ್ಸು ಅಲೆಮಾರಿಯಾಗದಿರಲಿ. ಮೊದಮೊದಲು ಎಂದಿನಂತೆ ಖುಷಿ ಅನುಭವಿಸುವೆ, ಆದರೆ ಅದು ಬೇಗನೆ ಆಧ್ಯಾತ್ಮಿಕ ಆನಂದಕ್ಕೆ ಎಡೆಮಾಡಿಕೊಡುತ್ತದೆ.'' ಇದನ್ನು ಕೇಳಿ ಇಬ್ಬರಿಗೂ ಆಶ್ಚರ್ಯವಾಯಿತು. ಏಕೆಂದರೆ, ಕಾಳಿಯ ಭಕ್ತನಾದ ತಾನು ಕುಡಿಯುವುದು ತಪ್ಪಾಗಿದ್ದರೆ, ಶ್ರೀರಾಮಕೃಷ್ಣರೇ ಹೇಳುತ್ತಾರೆ, ನೀನು ಅದನ್ನು ಪ್ರಸ್ತಾಪಿಸಬೇಡ ಎಂದು ಸುರೇಂದ್ರ ರಾಮಚಂದ್ರನೊಂದಿಗೆ ಒಪ್ಪಂದ ಮಾಡಿಕೊಂಡು ಬಂದಿದ್ದ!

ಸುರೇಂದ್ರನಿಗೆ ಶ್ರೀರಾಮಕೃಷ್ಣರ ಮೇಲೆ ಪ್ರೀತಿ ಆಳವಾಗತೊಡಗಿತು. ದಕ್ಷಿಣೇಶ್ವರದಲ್ಲಿ ರಾತ್ರಿ ಕಳೆಯುವ ಭಕ್ತರಿಗಾಗಿ ಆಹಾರ ಮತ್ತು ಹಾಸಿಗೆಯ ವ್ಯವಸ್ಥೆ ಮಾಡಿದ. ಸುರೇಂದ್ರನ ಧಾರಾಳತನವನ್ನು ಶ್ರೀರಾಮಕೃಷ್ಣರು ಮೆಚ್ಚಿದರು. ಒಮ್ಮೆ ಸುರೇಂದ್ರನಿಗೆ ಹೇಳಿದರು: ''ಆಗಾಗ ಇಲ್ಲಿಗೆ ಬಾ. ಹಿತ್ತಾಳೆ ಪಾತ್ರೆಯನ್ನು ಆಗಾಗ ತೊಳೆಯದಿದ್ದರೆ ಕಿಲುಬು ಕಟ್ಟಿಕೊಳ್ಳುತ್ತದೆ ಎಂದು ತೋತಾಪುರಿ ಹೇಳುತ್ತಿದ್ದ. ಸಾಧುಸಂಗ ಮಾಡುತ್ತಿರಬೇಕು. ಕಾಮಿನಿ ಕಾಂಚನ ತ್ಯಾಗ ಸಂನ್ಯಾಸಿಗಳಿಗೆ, ನಿನಗಲ್ಲ. ಆಗಾಗ ನೀನು ಏಕಾಂತ ಸ್ಥಳದಲ್ಲಿ ದೇವರನ್ನು ವ್ಯಾಕುಲ ಚಿತ್ತದಿಂದ ಕರೆಯಬೇಕು. ನಿನ್ನ ತ್ಯಾಗ ಮಾನಸಿಕವಾಗಿರಬೇಕು. ನೀವು ಮಾಡಬೇಕಾದ ಸಾಧನೆ, ಚೈತನ್ಯ ಹೇಳಿದಂತೆ, ಜೀವಿಗಳ ಮೇಲೆ ಅನುಕಂಪ, ಭಕ್ತರ ಸೇವೆ, ಮತ್ತು ಭಗವನ್ನಾಮ ಜಪ.''

ಸುರೇಂದ್ರ, ಶ್ರೀರಾಮಕೃಷ್ಣರ ಸೇವೆಯ ಜತೆಗೆ ಆಧ್ಯಾತ್ಮಿಕ ಸಾಧನೆ ಮತ್ತು ಭಕ್ತರ ಸೇವೆ ಮಾಡತೊಡಗಿದ. ಇದರಲ್ಲಿ ಅವನೇ ಮೊದಲು, ಕೆಲವು ಮುಖ್ಯ ಕಾರ್ಯಗಳನ್ನು ಮಾಡಿದುದು. ಶ್ರೀರಾಮಕೃಷ್ಣರ ಜನ್ಮೋತ್ಸವದ ಆಚರಣೆಯನ್ನು ಮೊದಲ ಬಾರಿ ೧೮೮೧ರಲ್ಲಿ ಏರ್ಪಡಿಸಿದವನು ಅವನೇ. ಮುಂದಿನ ವರ್ಷವೂ ಅದರ ವೆಚ್ಚವನ್ನು ಅವನೇ ಭರಿಸಿದ. ನರೇಂದ್ರ (ಮುಂದೆ ಸ್ವಾಮಿ ವಿವೇಕಾನಂದರು) ಶ್ರೀರಾಮಕೃಷ್ಣರನ್ನು ಪ್ರಥಮ ಬಾರಿ ನೋಡಿದುದು ಸುರೇಂದ್ರನ ಕಲ್ಕತ್ತೆಯ ಮನೆಯಲ್ಲಿ. ನರೇಂದ್ರನನ್ನು ಮೊದಲ ಬಾರಿ ದಕ್ಷಿಣೇಶ್ವರಕ್ಕೆ ಕರೆದೊಯ್ದವನು ಸುರೇಂದ್ರ. ಹಿಂದೂ, ಕ್ರೈಸ್ತ, ಇಸ್ಲಾಂ, ಬೌದ್ಧ ಮತ್ತು ಇತರ ಧರ್ಮಗಳ ಸಮನ್ವಯವನ್ನು ಕೇಶವಚಂದ್ರಸೇನನಿಗೆ ಶ್ರೀರಾಮಕೃಷ್ಣರು ತೋರುತ್ತಿರುವ ತೈಲವರ್ಣ ಚಿತ್ರವನ್ನು ಮಾಡಿಸಿದವನು ಸುರೇಂದ್ರ. ಕೇಶವ ಆ ವರ್ಣಚಿತ್ರವನ್ನು ನೋಡಿ, ''ಯಾರು ಇದರ ಕಲ್ಪನೆಯನ್ನು ಮಾಡಿದರೋ ಅವರು ಧನ್ಯರು'' ಎಂದನು. ಶ್ರೀರಾಮಕೃಷ್ಣರು ಅದನ್ನು ನೋಡಿ, ''ಹೌದು, ಇದರಲ್ಲಿ ಎಲ್ಲವೂ ಇದೆ. ಆಧುನಿಕ ಕಾಲಕ್ಕೆ ಇದೇ ಆದರ್ಶ'' ಎಂದರು. ಶ್ರೀರಾಮಕೃಷ್ಣರನ್ನು ಒಂದು ಸ್ಟುಡಿಯೋಗೆ ಕರೆದುಕೊಂಡು ಹೋಗಿ ಅವರ ಭಾವಚಿತ್ರವನ್ನು ತೆಗೆಸಿದವನು ಈತನೇ. ಇದೇ ಅವರ ಎರಡನೆಯ ಭಾವಚಿತ್ರ.

ಶ್ರೀರಾಮಕೃಷ್ಣರ ಆರೋಗ್ಯ ಸುಧಾರಿಸದಿದ್ದಾಗ ಅವರನ್ನು ಶ್ಯಾಮಪುಕುರದಿಂದ ಕಾಶಿಪುರದ ತೋಟದ ಮನೆಗೆ ಕರೆದುಕೊಂಡು ಹೋಗಲಾಯಿತು. ಆ ಮನೆಯ ದುಬಾರಿ ಬಾಡಿಗೆ ಮತ್ತು ಇತರ ಖರ್ಚುಗಳನ್ನು ಸುರೇಂದ್ರ ಸಂತೋಷದಿಂದ ವಹಿಸಿಕೊಂಡ. ಶ್ರೀರಾಮಕೃಷ್ಣರು ಕಾಲವಾದ ಕೆಲವು ವಾರಗಳ ನಂತರ, ಅವನು ದೇವರ ಮನೆಯಲ್ಲಿ ಧ್ಯಾನ ಮಾಡುತ್ತಿದ್ದಾಗ, ಶ್ರೀರಾಮಕೃಷ್ಣರ ದರ್ಶನವಾಗಿ, ಅದರಲ್ಲಿ ಅವರು, ''ಇಲ್ಲೇನು ಮಾಡುತ್ತಿರುವೆ? ನನ್ನ ಹುಡುಗರು (ಸಂನ್ಯಾಸಿಗಳು) ವಾಸಿಸಲು ನೆಲೆಯಿಲ್ಲದೆ ಅಲೆಯುತ್ತಿರುವರು. ಮೊದಲು ಅವರಿಗೆ ಒಂದು ವ್ಯವಸ್ಥೆ ಮಾಡು'' ಎಂದರು. ಸುರೇಂದ್ರ ಕೂಡಲೆ ನರೇಂದ್ರನ ಮನೆಗೆ ಓಡಿದ. ''ಒಂದು ಮನೆ ಬಾಡಿಗೆಗೆ ತೆಗೆದುಕೊಳ್ಳೋಣ. ನೀವೆಲ್ಲರೂ ಅದರಲ್ಲಿ ಇರಿ. ಅದರ ಬಾಡಿಗೆ ಮತ್ತು ನಿಮ್ಮ ಖರ್ಚು ನಾನು ಕೊಡುತ್ತೇನೆ'' ಎಂದು ಹೇಳಿದ. ಹೀಗೆ ಮುಂದೆ ಬರುವ ಶ್ರೀರಾಮಕೃಷ್ಣ ಮಿಷನ್ ಸಂನ್ಯಾಸಿಗಳ ಸಂಸ್ಥೆಗೆ ಅಸ್ತಿಭಾರ ಹಾಕಿದ. ಸುರೇಂದ್ರ ೧೮೯೦ರಲ್ಲಿ, ತನ್ನ ೪೦ನೆ ವಯಸ್ಸಿನಲ್ಲಿ ಕಾಲವಾದ. ಕೊನೆಗಾಲದಲ್ಲಿ ಆತನಿಗೆ ಕಾಯಿಲೆಯಾಗಿದ್ದಾಗ ಅವನನ್ನು ನೋಡಲು ಸ್ವಾಮಿ ಅದ್ಭುತಾನಂದ ಮತ್ತು ರಾಮಕೃಷ್ಣಾನಂದರು ಹೋದರು. ಶ್ರೀರಾಮಕೃಷ್ಣರಿಗೆ ಒಂದು ಪೂಜಾಗೃಹವನ್ನು ಕಟ್ಟಲು ಅವನು ೫೦೦ರೂಗಳನ್ನು ಕೊಟ್ಟನು. ರಾಮಕೃಷ್ಣಾನಂದರು, ''ನಿಮ್ಮ ಆರೋಗ್ಯ ಸುಧಾರಿಸುವವರೆಗೆ ಕಾಯೋಣ. ನಂತರ ಮಾತನಾಡೋಣ'' ಎಂದರು. ಆದರೆ ಸುರೇಂದ್ರ ಗುಣ

ವಾಗಲಿಲ್ಲ. ಸಾಯುವ ಮುನ್ನ, ಗಂಗಾತಟದಲ್ಲಿ ಶ್ರೀರಾಮಕೃಷ್ಣರಿಗಾಗಿ ಒಂದು ಮಠ ಕಟ್ಟಲು ನಿವೇಶನಕ್ಕಾಗಿ ೧೦೦೦೦ರೂ.ಗಳನ್ನು ತೆಗೆದಿಟ್ಟ. ಶ್ರೀರಾಮಕೃಷ್ಣರ ಸಂನ್ಯಾಸಿ ಶಿಷ್ಯರು ಅವನನ್ನು ಬಹಳ ಪ್ರೀತಿಸುತ್ತಿದ್ದರು. ಆದಕಾರಣ ಅವನ ಹಣವನ್ನು ವಿಶೇಷ ರೀತಿಯಲ್ಲಿ ಉಪಯೋಗಿಸಲು ನಿರ್ಧರಿಸಿದರು. ಅನೇಕ ವರ್ಷಗಳ ನಂತರ ಬೇಲೂರು ಮಠವನ್ನು ಕಟ್ಟಿದಾಗ ಶ್ರೀರಾಮಕೃಷ್ಣರನ್ನು ಸ್ಥಾಪಿಸಿದ ಗರ್ಭಗೃಹದ ನೆಲಕ್ಕೆ ಅಮೃತಶಿಲೆಯ ಹಾಸುಗಲ್ಲುಗಳಿಗಾಗಿ ಅವನ ಹಣವನ್ನು ಉಪಯೋಗಿಸಿದರು. ಶ್ರೀರಾಮಕೃಷ್ಣರು ಸುರೇಂದ್ರನಿಗೆ ಒಮ್ಮೆ ಹೇಳಿದ್ದರು: ''ನಾನು ನಿನ್ನನ್ನು ಒಮ್ಮೆ ದರ್ಶನವೊಂದರಲ್ಲಿ ಜಗನ್ಮಾತೆಯ ಮಗುವಾಗಿ ಕಂಡೆ. ನಿನಗೆ ಯೋಗ, ಭೋಗ ಎರಡೂ ಇವೆ. ಇಲ್ಲದಿದ್ದರೆ ನಿನ್ನ ಮುಖ ನೀರಸವಾಗಿ ಕಾಣುತ್ತಿತ್ತು.''

ಶ್ರೀರಾಮಕೃಷ್ಣರ ಗೃಹಸ್ಥ ಭಕ್ತರು ಅನೇಕ ವೈವಿಧ್ಯತೆಯಿಂದ ಕೂಡಿದ್ದಾರೆ. ಗೃಹಸ್ಥ ಧರ್ಮದ ಆದರ್ಶದಲ್ಲಿ ತರತಮಗಳಿವೆ. ಎಲ್ಲರೂ ಅವರಿಗೆ ಸಾಧ್ಯವಾದ ಮಟ್ಟಿಗೆ ಅದರ ವಿವಿಧ ಆಯಾಮಗಳನ್ನು ಅವರ ಜೀವನದಲ್ಲಿ ಬಿಂಬಿಸಿದ್ದಾರೆ. ಗೃಹಸ್ಥ ಧರ್ಮದ ಆಚರಣೆ ಒಂದು ಸಮಾಜದ ಆರೋಗ್ಯವನ್ನು ಸೂಚಿಸುತ್ತದೆ. ಗೃಹಸ್ಥಾಶ್ರಮ ಸಮಾಜದ ಬುನಾದಿ. ಗೃಹಸ್ಥಾಶ್ರಮ ಬಲವಾಗಿದ್ದರೆ ಮಾತ್ರ ಅದರಿಂದ ಒಳ್ಳೆಯ ಬ್ರಹ್ಮಚಾರಿಗಳು, ಸಂನ್ಯಾಸಿಗಳು ಬರಲು ಸಾಧ್ಯ. ಶ್ರೀರಾಮಕೃಷ್ಣರ ಗೃಹೀ ಭಕ್ತರು ವಿವಿಧ ಶ್ರೇಣಿಗಳಿಗೆ ಸೇರಿದವರಾಗಿರುತ್ತಾರೆ. ಅದನ್ನು ನಾವು ಗುರುತಿಸಲಾರೆವು. ಕೆಲವರು ಮುಕ್ತರು. ಅವತಾರದೊಂದಿಗೆ ಇಳೆಗೆ ಬರಲೇಬೇಕಾಗುತ್ತದೆ. ಕೆಲವರು ಲೀಲಾಸಹಾಯಕರು. ಕೆಲವರಿಗೆ ಗೊತ್ತಾದ ಪಾತ್ರವಿರುತ್ತದೆ. ಕೆಲವರು ಲೋಕಶಿಕ್ಷಣಕ್ಕಾಗಿ ಬರುತ್ತಾರೆ. ಕೆಲವರಿಗೆ ಅದೇ ಕೊನೆಯ ಜನ್ಮ. ಇವನ್ನು ಶ್ರೀರಾಮಕೃಷ್ಣರೇ ತಿಳಿಸಿದ್ದಾರೆ. ಉದಾಹರಣೆಗೆ ರಾಣಿ ರಾಸಮಣಿ ಭಗವತಿಯ ಅಷ್ಟ ಮಾತೃಕೆಯರಲ್ಲಿ ಒಬ್ಬಳು ಎಂದು ಶ್ರೀರಾಮಕೃಷ್ಣರು ತಿಳಿಸಿರುವರು. ಈ ವಿವರಗಳು, ಶ್ರೀರಾಮಕೃಷ್ಣರು ತಿಳಿಸಿದ ಹೊರತು ನಮಗೆ ತಿಳಿಯುವಂತಿಲ್ಲ. ಶ್ರೀರಾಮಕೃಷ್ಣರ ಗೃಹೀಭಕ್ತರಲ್ಲೆಲ್ಲಾ ಪ್ರಧಾನವಾಗಿ ಕಾಣುವ ಗುಣಗಳೆಂದರೆ, ಅವರಿಗೆ ಶ್ರೀರಾಮಕೃಷ್ಣರ ಮೇಲೆ ಅನನ್ಯ ಭಕ್ತಿ, ಅವರು ಭಕ್ತರಿಗೆ ಮಾಡುವ ಸೇವೆ. ತಮ್ಮಲ್ಲಿರುವುದನ್ನು ಭಕ್ತರ ಸೇವೆಗೆ, ಕಷ್ಟದಲ್ಲಿರುವವರ ಸಹಾಯಕ್ಕೆ ಉಪಯೋಗಿಸುತ್ತಾರೆ. ಭಗವಂತನ ಮಕ್ಕಳ ಸೇವೆಯ ಮೂಲಕ ಭಗವಂತನ ಸೇವೆ ಮಾಡುತ್ತಾರೆ. ನಂತರ, ಮುಖ್ಯವಾದುದೇ ಅವರ ಆಧ್ಯಾತ್ಮಿಕ ಸಾಧನೆ. ಅವರು ಮಾಡುವ ಸೇವೆ, ಅವರ ಆಧ್ಯಾತ್ಮಿಕ ಸಾಧನೆಗೆ ಸಾಧನ. ಅವರ ಭಗವತ್ಪ್ರೇಮ ಅವರ ಸೇವೆಗೆ ಪ್ರೇರಕ ಮತ್ತು ಪೂರಕ. ಇವೆಲ್ಲಕ್ಕೂ ಆಧಾರಪ್ರಾಯವಾದ ಗುಣವೊಂದು ಅವರೆಲ್ಲರ ಜೀವನದಲ್ಲಿ ಹಾಸುಹೊಕ್ಕಾಗಿದೆ. ಅದೇ ಸತ್ಯನಿಷ್ಠೆ ಮತ್ತು ಪ್ರಾಮಾಣಿಕತೆ. ಅವರ ಸತ್ಯನಿಷ್ಠೆಯೇ ಅವರನ್ನು ದೇವರೆಡೆಗೆ ಕೊಂಡೊಯ್ದುದು. ಅವರೆಲ್ಲಾ ಸರಳ ಮತ್ತು ನೇರ. ತೋರಿಕೆಯಿಲ್ಲ. ಅವರ ಮಾತು, ಮನಸ್ಸು ಮತ್ತು ಕೆಲಸ ಒಂದಾಗಿರುವುದನ್ನು ನೋಡುವೆವು. ಅದೇ ಪ್ರಾಮಾಣಿಕತೆ. ''ಕಲಿಯುಗದಲ್ಲಿ ಸತ್ಯವಚನವೇ ತಪಸ್ಸು'' ಎಂದು ಶ್ರೀರಾಮಕೃಷ್ಣರು ಹೇಳಿರುವರು. ಈ ಗುಣವಿಲ್ಲದಿದ್ದರೆ ಆಧ್ಯಾತ್ಮಿಕ ಜೀವನದತ್ತ ಹೋಗಲಾಗುವುದಿಲ್ಲ. ಹೋದರೂ ಆ ಮಾರ್ಗದಲ್ಲಿ ಮುಂದುವರಿಯಲಾಗುವುದಿಲ್ಲ. ಶ್ರೀರಾಮಕೃಷ್ಣರ ಸಂನ್ಯಾಸಿ ಶಿಷ್ಯರ ಜೀವನಾದರ್ಶಗಳನ್ನು ಅರ್ಥ ಮಾಡಿಕೊಳ್ಳುವುದು ಕಷ್ಟ. ಆದರೆ ಗೃಹೀಭಕ್ತರನ್ನು ಅರ್ಥ ಮಾಡಿಕೊಳ್ಳುವುದು ಸುಲಭ. ಅವರು ನಮ್ಮ ಜೀವನಕ್ಕೆ ಹತ್ತಿರವಿರುವರು. ನಮ್ಮಂತೆ ಕಾಣುವರು. ಅವರ ಮೂಲಕ ಶ್ರೀರಾಮಕೃಷ್ಣರನ್ನು, ಅವರ ಸಂನ್ಯಾಸಿ ಶಿಷ್ಯರನ್ನು ತಿಳಿದುಕೊಳ್ಳಲು ಸಾಧ್ಯವಾಗುವುದು. ಅವರ ಜೀವನವನ್ನು ಕುರಿತು ಚಿಂತಿಸುವುದರಿಂದ ನಮ್ಮ ಆಧ್ಯಾತ್ಮಿಕ ಸಾಧನೆ ಸುಭಗವಾಗುವುದು. ಅದರಲ್ಲಿ ನಮಗೆ ವಿಶ್ವಾಸ ಉಂಟಾಗುವುದು. ಭರವಸೆ ಮೂಡುವುದು. ಅವರ ಆದರ್ಶ ನಮಗೆ ಊರುಗೋಲಾಗುವುದು. ಮುಖ್ಯವಾಗಿ ನಮ್ಮ ಪ್ರಾಪಂಚಿಕ ಜೀವನಕ್ಕೆ ಅರ್ಥ ಬರುವುದು.

## ಆಹಾರ, ಸಂಯಮ ಮತ್ತು ಸಾಧನೆ

ಆಹಾರದ ಉದ್ದೇಶ ಕೇವಲ ನಾಲಗೆಯ ತೃಪ್ತಿ ಸಾಧನೆಯೆ ಅಲ್ಲ. ಶರೀರಧಾರಣೆಗಾಗಿ ಆಹಾರ; ಶರೀರಧಾರಣೆಯ ಉದ್ದೇಶವೂ ಭಗವತ್‌ಸಾಕ್ಷಾತ್ಕಾರ. ಯಾವುದನ್ನು ತಿಂದರೆ ಮನಸ್ಸು ಚಂಚಲವಾಗುತ್ತದೆಯೋ, ಯಾವ ಆಹಾರ ಮನಸ್ಸನ್ನು ಭಗವನ್ಮುಖಿಯನ್ನಾಗಿ ಮಾಡುವುದಕ್ಕೆ ಅಡ್ಡಿಯಾಗುತ್ತದೆಯೊ, ಅಂತಹ ಎಲ್ಲ ತಿನಿಸನ್ನೂ ಬಿಟ್ಟುಬಿಡುವುದು ಒಳ್ಳೆಯದು. ಕೇವಲ ಆಹಾರದಲ್ಲಿ ಮಾತ್ರ ಸಂಯಮ ಸಾಧನೆ ಮಾಡುವುದೆ ಬ್ರಹ್ಮ ಚರ್ಯ ಪಾಲನೆ ಮಾಡಿದಂತಾಗುವುದಿಲ್ಲ. ನಿಜವಾದ ಬ್ರಹ್ಮಚರ್ಯ ಎಂದರೆ ಇಂದ್ರಿಯ ಸಂಯಮ. ಅದನ್ನು ಸಾಧಿಸದಿದ್ದರೆ ಭಗವದಾನಂದ ಎನ್ನುವುದು ಬಹುದೂರದ ಮಾತು. ತುಚ್ಛ ರಕ್ತಮಾಂಸಗಳ ಈ ದೇಹದ ಆನಂದವನ್ನು ತೊರೆಯಲಾಗದಿದ್ದರೆ ಆ ಬ್ರಹ್ಮಾನಂದ ಲಾಭ ಎಂದಾದರೂ ಸಂಭವವಾದೀತೆ? ನೀನು ಸಂಸಾರಾಶ್ರಮದಲ್ಲಿದ್ದೀಯೆ. ಠಾಕೂರರು ಸಂಸಾರಿಗಳಿಗಾಗಿ ಭಗವತ್ ಸಾಕ್ಷಾತ್ಕಾರ ಮಾಡಿಕೊಳ್ಳುವ ದಾರಿಯನ್ನು ಸರಾಗಮಾಡಿ ಹೋಗಿದ್ದಾರೆ. ಠಾಕೂರರು ಹೇಳುತ್ತಿದ್ದರು, ಒಂದೆರಡು ಮಕ್ಕಳಾದಮೇಲೆ ಗಂಡಹೆಂಡಿರು ಅಣ್ಣತಂಗಿಯರಂತೆ ಇದ್ದುಕೊಂಡು, ದೇಹದ ಸಂಬಂಧದಿಂದ ದೂರವಾಗಿ ಪರಸ್ಪರ ಭಗವತ್ ಪ್ರಸಂಗ ಮಾಡುತ್ತಾ ಇಬ್ಬರೂ ಭಗವಂತನ ಪಾದಸೇವಕರಂತಿರಬೇಕು ಎಂದು. ದೇಹದ ಸುಖ-ಭೋಗಕ್ಕಾಗಿ ಅಲ್ಲ ಈ ಬದುಕು ಬಂದಿರುವುದು. ಭಗವಂತನ ಲಾಭವೆ ಮಾನವ ಜೀವನದ ಉದ್ದೇಶ. ದುರ್ಲಭವಾದ ಮನುಷ್ಯಜನ್ಮ ನಿನಗೀಗ ಲಭಿಸಿದೆ; ಆದ್ದರಿಂದ ಜೀವನವನ್ನು ವ್ಯರ್ಥವಾಗಿ ಹೋಗಲು ಬಿಡಬಾರದು. ಆತ್ಮಸ್ವರೂಪವನ್ನು ಅರಿಯುವ ಪ್ರಯತ್ನ ಮಾಡಬೇಕು.

*— ಸ್ವಾಮಿ ಶಿವಾನಂದ ('ಗುರುವಿನೊಡನೆ ದೇವರಡಿಗೆ', ಪು.೩೧೦-೧೧)*